ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಫೆಬ್ರವರಿ 2014 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 5
ಪುಟ : 20
ಬೆಲೆ : ₹ 5/-

## ರಾಜ್ಯಾದ್ಯಂತ ನಡೆದ ಶಿಕ್ಷಕರ 'ಸಂಕಲ್ಪ ದಿನಾಚರಣೆ'













ಭಾರತರತ್ನ ಪ್ರಶಸ್ತಿ ಪಡೆದ ಶ್ರೀ ಸಿ.ಎನ್.ಆರ್. ಹಾಗೂ ಶ್ರೀ ಸಚ್ಚಿನ್ ತೆಂಡೂಲ್ಕರ್‌ರವರಿಗೆ ಅಭಿನಂದನೆಗಳು

ಜೀವನದಿ- ಹೆಚ್.ಎನ್.ಆರ್ 5

7 2014-15 - ಮಹಿಳಾ ವರ್ಷ ಆಚರಣೆಗೆ ಕರೆ

ವಿವೇಕಾನಂದ ಹುಟ್ಟಿರದಿದ್ದರೆ ???!!!....9 9

# ಸಂಪಾದಕೀಯ

ದೇಶದ ಅತ್ಯುನ್ನತ ಪ್ರಶಸ್ತಿ 'ಭಾರತ ರತ್ನ'. ಈ ಪ್ರಶಸ್ತಿಗೆ ದೇಶದ ಶ್ರೇಷ್ಠ ವಿಜ್ಞಾನಿ, ಕನ್ನಡಿಗ ಪ್ರೊ. ಸಿ.ಎನ್.ಆರ್. ರಾವ್ ಭಾಜನರಾಗಿದ್ದಾರೆ. ಇದು ಶ್ರೀ ಸಿ.ಎನ್. ಆರ್. ರಾವ್‌ರವರ ವೈಜ್ಞಾನಿಕ ಪ್ರತಿಭೆ, ಸಾಧನೆಗೆ ಸಂದ ಶ್ರೇಷ್ಠ ಗೌರವ. ಇವರು ಕರ್ನಾಟಕದವರು ಎಂಬುದು ನಮಗೆಲ್ಲ ತುಂಬ ಹೆಮ್ಮೆಯ ಸರಿ.' ಭಾರತ ರತ್ನ' ಪ್ರೊ. ಸಿ.ಎನ್.ಆರ್.ರಾವ್ ಅವರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಶ್ರೀಯುತ ರಾವ್ ಅವರ ಸಾಧನೆಯ ಫಲ ವಿಜ್ಞಾನಕ್ಕೆ ಇನ್ನೂ ಹೆಚ್ಚು ಲಭಿಸುವಂತಾಗಲಿ ಎಂದು 'ಶಿಕ್ಷಕ ಸಮಾಚಾರ' ಹಾರೈಸುತ್ತದೆ. ಕ್ರಿಕೆಟ್ ಆಟದಲ್ಲಿ ಅದ್ಭುತ ಸಾಧನೆಯನ್ನು ಮಾಡಿರುವವರು ಶ್ರೀಯುತ ಸಚಿನ್ ತಂಡೂಲ್ಕರ್. ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿರುವುದು ಎಲ್ಲರಿಗೂ ಹೆಮ್ಮೆಯ ಸಂಗತಿ. ಶ್ರೀ ಸಚಿನ್ ತಂಡೂಲ್ಕರ್ ಅವರಿಗೆ ನಮ್ಮ ಶಿಕ್ಷಕ ಸಂಘದ ಮನಃಪೂರ್ವಕ ಅಭಿನಂದನೆಗಳು.

ಕರ್ನಾಟಕದ ಕೀರ್ತಿಯ ಮುಕುಟಕ್ಕೆ ಮತ್ತೊಂದು ಮಣಿ ಸೇರಿದೆ. ಸಾಫ್ಟ್‌ವೇರ್ ದಿಗ್ಗಜ, ಭಾರತೀಯ ಶ್ರೀ ಸತ್ಯಾನಾದೆಲ್ಲ ಜಗತ್ತಿನ ಪ್ರತಿಷ್ಠಿತ ಮೈಕ್ರೋ ಸಾಫ್ಟ್ ಕಂಪನಿಯ ಸಿ.ಇ.ಓ. ಆಗಿ ನೇಮಕವಾಗಿರುವುದು ಭಾರತೀಯರಿಗೆಲ್ಲ ಸಂತಸ, ಹೆಮ್ಮೆಯನ್ನು ಉಂಟು ಮಾಡಿದೆ. ಶ್ರೀಯುತ ಸತ್ಯಾನಾದೆಲ್ಲರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಹೀಗೇ ಎಲ್ಲವೂ ಸಂತೋಷದಾಯಕವಾದ ಸಂಗತಿಗಳೇ ಇರುತ್ತಿದ್ದರೆ ಎಷ್ಟು ಚೆನ್ನ! ಆಗ ನಮ್ಮನ್ನು ಹಿಡಿಯುವವರೇ ಇರುತ್ತಿರಲಿಲ್ಲವಷ್ಟೆ. ಅದಕ್ಕಾಗಿಯೇ ಕಾಣದ ಆ ದೇವರು ನೋವು-ನಲಿವು; ಬೇವು-ಬೆಲ್ಲ; ಸುಖ-ದುಃಖಗಳನ್ನು ಜೊತೆಜೊತೆಯಾಗಿಯೇ ನೀಡುತ್ತಿರುತ್ತಾನೆ. ಈ ಸತ್ಯವನ್ನು ದೃಢಪಡಿಸಲೋ ಏನೋ ನಾಡಿನ ಇಬ್ಬರು ಹಿರಿಯ ವಿದ್ವಾಂಸರ ಸಾವಿನ ಬರಸಿಡಿಲು ನಮ್ಮ ನಾಡಿನ ಜನತೆಗೆ ಎರಗಿದೆ. ವಯೋವೃದ್ಧರೂ, ಜ್ಞಾನವೃದ್ಧರುಗಳಾದ ಪ್ರೊ. ಎಸ್. ಆರ್. ರೋಹಿಡೇಕರ್ ಹಾಗೂ ಪ್ರೊ. ರಂಗನಾಥಶರ್ಮರು ಇತ್ತೀಚೆಗೆ ಅಸ್ತಂಗತರಾಗಿದ್ದಾರೆ.

ಶಿಕ್ಷಣ ಕ್ಷೇತ್ರದ ದಿಗ್ಗಜರು ಪ್ರೊ. ಎಸ್. ಆರ್. ರೋಹಿಡೇಕರ್‌ರವರು. 1915 ರಲ್ಲಿ ಬಿಜಾಪುರದಲ್ಲಿ ಜನಿಸಿದ ರೋಹಿಡೇಕರ್ 99 ವರ್ಷಗಳ ಸಾರ್ಥಕ ಜೀವನ ನಡೆಸಿ ಇತ್ತೀಚೆಗೆ ವಿಧಿವಶರಾದರು. ಶ್ರೀಯುತರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ವಿದ್ಯಾಇಲಾಖೆಯ ಅಧಿಕಾರಿಗಳಾಗಿ, ನಿರ್ದೇಶಕರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ನಿವೃತ್ತಿಯ ನಂತರವೂ ಶಿಕ್ಷಣದಲ್ಲಿ ಸುಧಾರಣೆಗಾಗಿ ಸಾಕಷ್ಟು ಚಿಂತನ ಮಂಥನ ನಡೆಸಿದವರು. ಈ ನಿಟ್ಟಿನಲ್ಲಿ ಹಲವಾರು ಕೃತಿಗಳನ್ನೂ ರಚಿಸಿದ್ದಾರೆ. ಪ್ರೊ. ರೋಹಿಡೇಕರರ ನಿಧನ ಶಿಕ್ಷಣ ಕ್ಷೇತ್ರಕ್ಕೆ ತುಂಬಲಾರದ ಕೊರತೆ. ಆದರೆ ಅವರ ವಿಚಾರಗಳು ನಮ್ಮೆಲ್ಲರಿಗೂ ಸದಾಕಾಲ ಮಾರ್ಗದರ್ಶಿ ಯಾಗಿರುತ್ತದೆ. ಶ್ರೀಯುತರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ಅವರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತದೆ.

ಪ್ರೊ. ರಂಗನಾಥಶರ್ಮರು ವಿದ್ಯಾವಾರಿಧಿ. ಶ್ರೀಶರ್ಮರು ಕನ್ನಡ ನಾಡಿನಲ್ಲಷ್ಟೇ ಅಲ್ಲ, ದೇಶದ ಶ್ರೇಷ್ಠ ಸಂಸ್ಕೃತ ವಿದ್ವಾಂಸರು. ಕನ್ನಡದಲ್ಲಿಯೂ ಉದ್ದಾಮ ಪಂಡಿತರಾಗಿದ್ದವರು. ಕನ್ನಡದಲ್ಲಿ 22, ಸಂಸ್ಕೃತದಲ್ಲಿ 11 ಕೃತಿಗಳನ್ನಲ್ಲದೆ 17 ಅನುವಾದ ಕೃತಿಗಳನ್ನೂ ರಚಿಸಿದ್ದಾರೆ. ಹೊಸ ಚಿಗುರು- ಹಳೆ ಬೇರು ಎಂಬಂತೆ ಪರಂಪರೆಯ ಪ್ರತಿನಿಧಿಯಾಗಿಯೂ, ಆಧುನಿಕ ಜೀವನವನ್ನು ತೆರೆದ ಕಣ್ಣಿಂದ ನೋಡಿದವರೂ ಆಗಿದ್ದರು. ಸದಾ ಜ್ಞಾನದ ಅರಸುವಿಕೆಯಲ್ಲಿ ಜೀವಿಸುತ್ತಿದ್ದ ಈ ಹಿರಿಯ ಚೇತನ 99ರ, ಶತಮಾನದ ಹೊಸ್ತಿಲಲ್ಲಿ ಚಿರನಿದ್ರೆಗೆ ಸಾಗಿದ್ದಾರೆ. ಇಂತಹ ಅದ್ವಿತೀಯ ಚೇತನಕ್ಕೆ ನಮ್ಮ ಗೌರವಪೂರ್ಣ ಶ್ರದ್ಧಾಂಜಲಿ. ಶ್ರೀಯುತರ ಆತ್ಮಕ್ಕೆ ಶಾಂತಿಯನ್ನು ಕರುಣಿಸುವಂತೆ ದೇವರಲ್ಲಿ ಪ್ರಾರ್ಥಿಸೋಣ.

ಫೆಬ್ರವರಿ 21ನ್ನು ಅಂತರರಾಷ್ಟ್ರೀಯ ಮಾತೃಭಾಷಾ ದಿನವಾಗಿ ಆಚರಿಸಲಾಗುತ್ತದೆ. ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ಇರಬೇಕೆಂಬುದು ಎಲ್ಲರ ಪ್ರತಿಪಾದನೆ. ಆದರೆ ಕರ್ನಾಟಕದಲ್ಲಿ ಆ ಕನಸು ಯಾವಾಗ ಸಾಕಾರವಾಗುತ್ತದೆ? ಸರ್ಕಾರ ಮನಸ್ಸು ಮಾಡಿದಾಗ. ಅದಕ್ಕಿಂತ ಹೆಚ್ಚಾಗಿ ಪೋಷಕರು ದೃಢ ಮನಸ್ಸು, ಧೈರ್ಯ ಮಾಡಿದಾಗ. ಅದು ಯಾವಾಗ? ಕಾಲವೇ ಉತ್ತರಿಸಬೇಕು.

28 ಫೆಬ್ರವರಿ ಅಂತರರಾಷ್ಟ್ರೀಯ ವಿಜ್ಞಾನ ದಿನ. ದೇಶವಿದೇಶಗಳಲ್ಲಿ ವಿಜ್ಞಾನಿಗಳ ಸಾಧನೆ ಅಪಾರ. ವೈಜ್ಞಾನಿಕ ಮನೋಭಾವ ಎಲ್ಲರಲ್ಲೂ ಬೆಳೆಯಬೇಕು. ವಿಶೇಷವಾಗಿ ವಿದ್ಯಾರ್ಥಿಗಳು ಪ್ರಶ್ನಿಸಿ, ಆ ಮೂಲಕ ವೈಜ್ಞಾನಿಕ ಮನೋಭಾವವನ್ನು ಹೆಚ್ಚಿಸಿಕೊಳ್ಳುವಂತಾಗಲಿ.

ಸಂಪಾದಕ

## ವಿವೇಕವಾಣಿ




**ಮನೋದೌರ್ಬಲ್ಯವನ್ನೂ ಹೃದಯದೌರ್ಬಲ್ಯವನ್ನೂ ಮೆಟ್ಟಿ 'ನನ್ನಲ್ಲಿ ಪರಾಕ್ರಮ ತುಂಬಿಕೊಂಡಿದೆ, ನನ್ನ ಬುದ್ಧಿ ಅತ್ಯಂತ ಸ್ಥಿರವಾಗಿದೆ' ಎನ್ನುತ್ತ ಎದ್ದು ನಿಲ್ಲು! ದೌರ್ಬಲ್ಯವು ನಿನ್ನ ಮನಸ್ಸನ್ನಾವರಿಸಲು ಎಡೆಗೊಡಲೇ ಬೇಡ.**

## ಪರಿವಿಡಿ


- ರಾಜ್ಯಾದ್ಯಂತ ನಡೆದ ಶಿಕ್ಷಕರ 'ಸಂಕಲ್ಪ ದಿನಾಚರಣೆ' 3
- ಜೀವನದಿ – ಹೆಚ್.ಎನ್.ಆರ್ 5
- ಆತಿಂಗನಾಳ್ ರಾಮರಾವ್ ವಾಸುದೇವಮೂರ್ತಿ 6
- 2014–15 "ಮಹಿಳಾ ವರ್ಷ" ಆಚರಣೆಗೆ ಕರೆ 7
- ಶಿಕ್ಷಣದ ಕೇಸರೀಕರಣದ ಆರೋಪ ನಿರಾಧಾರ – ಸರ್ವೋಚ್ಛ ನ್ಯಾಯಾಲಯ 7
- ಇಂಜಿನಿಯರ್, ವಿಜ್ಞಾನಿ – ರಾಜೇಶ್ವರಿ ಚಟರ್ಜಿ 8
- ವಿವೇಕಾನಂದ ಹುಟ್ಟದೇ ಇದ್ದಿದ್ದರೆ ?! 9
- ಪೂಜನೀಯ ವಿದ್ವಾನ್ ಎನ್. ರಂಗನಾಥ ಶರ್ಮರವರು 11
- ಸದನದಲ್ಲಿ ಪ್ರಶ್ನೋತ್ತರ 13
- ವಿಧೇಯಕ 15
- ವಿದ್ಯಾರ್ಥಿ ಮಿತ್ರ – 4 18

# ರಾಜ್ಯಾದ್ಯಂತ ನಡೆದ ಶಿಕ್ಷಕರ 'ಸಂಕಲ್ಪ ದಿನಾಚರಣೆ'

# ಭಾರತದ ಇತಿಹಾಸ ಸಂಘರ್ಷದ ಇತಿಹಾಸವಾಗಿದೆ

**– ಪ್ರೊ.ಕೃ.ನರಹರಿ**

ದಿನಾಂಕ: 20.01.2014 ರಂದು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಗರಿಬೊಮ್ಮನಹಳ್ಳಿ ತಾಲೂಕು ಘಟಕದ ವತಿಯಿಂದ ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆ ಮತ್ತು ನೇತಾಜಿ ಸುಭಾಷ್ ಚಂದ್ರಭೋಸ್‌ರ 117ನೇ ಜನ್ಮ ದಿನಾಚರಣೆ ನಿಮಿತ್ತ ಪ್ರೌಢಶಾಲಾ ಶಿಕ್ಷಕರಿಗಾಗಿ 'ಇತಿಹಾಸದ ವಿಕೃತೀಕರಣ' ಹಾಗೂ 'ಸಂಕಲ್ಪ ಬೋಧನಾ' ಎಂಬ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಮುಖ್ಯ ವಕ್ತಾರರಾಗಿ ಆಗಮಿಸಿದ್ದ ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಸಂರಕ್ಷಕರಾದ ಪ್ರೊ.ಕೃ.ನರಹರಿಯವರು ಕಾರ್ಯಕ್ರಮವನ್ನುದ್ದೇಶಿಸಿ 'ಇತಿಹಾಸವು ಇಂದಿನ ಪೀಳಿಗೆಗೆ ಧೈರ್ಯ ಸಾಹಸ ಮತ್ತು ವಿಜಯದ ಕನಸನ್ನು ನೀಡುತ್ತದೆ. ಅಷ್ಟಲ್ಲದೇ ಸ್ವ–ಸಾಮರ್ಥ್ಯ ಸ್ವ–ಕರ್ತವ್ಯದ ಅರಿವನ್ನು ಮೂಡಿಸುತ್ತದೆ. ಇತಿಹಾಸವೇ ದೇಶದ ಪ್ರಾಣ. ಹಾಗಾಗಿ ಯಾವ ದೇಶ ತನ್ನ ಇತಿಹಾಸವನ್ನು ಮರೆಯುತ್ತದೆಯೋ ಆ ದೇಶ ತನ್ನ ಅಸ್ಮಿತೆ ಹಾಗೂ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ' ಎಂದು ಅಭಿಪ್ರಾಯಪಟ್ಟರು.

ಭಾರತದಲ್ಲಿ ಲಾರ್ಡ್ ಮೆಕಾಲೆ ಇಂಗ್ಲೀಷ್ ಶಿಕ್ಷಣ ಪದ್ಧತಿಗೆ ಅಡಿಪಾಯವನ್ನು ಹಾಕಿದನು. ಬೌದ್ಧಿಕವಾಗಿ ಭಾವನಾತ್ಮಕವಾಗಿ ಸಾಂಸ್ಕೃತಿಕವಾಗಿ ಭಾರತದ ಮೂಲ ಪರಂಪರೆಯ ಬೇರುಗಳನ್ನು ತೆಗೆದು ಹಾಕಬೇಕೆಂದು ಸಂಕಲ್ಪಿಸಿದನು. ಹಾಗಾಗಿ ಶಿಕ್ಷಣ ಪದ್ಧತಿ ಕಾಲ ಕ್ರಮೇಣ ಬದಲಾವಣೆಯಾಯಿತು. ಇದರಲ್ಲಿ ಭಾರತವನ್ನು ಕ್ರೈಸ್ತೀಕರಣಗೊಳಿಸುವುದು, ಭಾರತದಲ್ಲಿನ ಮೂಲ ಸಂಸ್ಕೃತಿ ಮತ್ತು ಪರಂಪರೆಗಳಿಗೆ ಕೊಡಲಿ ಪೆಟ್ಟು ಹಾಕುವುದು. ಯಾವುದಕ್ಕೂ ಬಗ್ಗದ ಜನರನ್ನು ಬಲತ್ಕಾರ, ಹಿಂಸೆಗಳಿಂದ ಬಗ್ಗು ಬಡಿಯುವ ಉದ್ದೇಶವನ್ನು ಹೊಂದಿ ಶಿಕ್ಷಣ ಪ್ರಾರಂಭ ವಾಯಿತು ಎಂದು ತಿಳಿಸಿದರು.

ಆಂಗ್ಲರಿಂದ ನಡೆದ ಇತಿಹಾಸದ ವಿಕೃತಿಗಳೆಂದರೆ ಭಾರತವನ್ನು ಇಂಡಿಯಾ ಎಂದು ಕರೆದರು. ಭಾರತದ ಜನ ಕ್ರೂರಿಗಳು, ಸೊಕ್ಕಿನವರು, ಹೃದಯಹೀನರು, ಅನಾಗರಿಕರು ಎಂದು ಬಿಂಬಿಸಿದ್ದು, ಸಂಸ್ಕೃತ ಭಾಷೆಯ ಬಗ್ಗೆ ತಿರಸ್ಕಾರ, ಭಾರತ ಒಂದು ರಾಷ್ಟ್ರವೇ ಅಲ್ಲವೆಂದು, ಮತ್ತು ಇತಿಹಾಸದ ಪಠ್ಯಪುಸ್ತಕಗಳಲ್ಲಿ ಭಾರತದ ಇತಿಹಾಸ ಸೋಲಿನ ಇತಿಹಾಸವಾಗಿದೆ ಎಂದು ಕಲಿಸಲು ಆಂಗ್ಲರು ನಿಶ್ಚಿಯಿಸಿದ್ದರಿಂದ ನೈಜ ಇತಿಹಾಸ ಮರೆಯಾಯಿತು. ಸ್ವಾತಂತ್ರ್ಯ ಹೋರಾಟ ಗಾರರಾದ ಚಂದ್ರಶೇಖರ್ ಆಜಾದ್, ಭಗತ್ ಸಿಂಗ್, ಶಿವಾಜಿ ಮತ್ತು ಮುಂತಾದವರನ್ನು ಭಯೋತ್ಪಾದಕರೆಂದು, ಹಿಂದೂ ಸಾಮಾಜಿಕ ವ್ಯವಸ್ಥೆಯೇ ದೇಶದ ಅವನತಿಗೆ ಕಾರಣವಾಗಿದೆ ಎಂದು ನಮ್ಮ ದೇವ ದೇವತೆಗಳ ಬಗ್ಗೆಯೂ ತಿರಸ್ಕಾರ ಬರುವಂತೆ ಬಣ್ಣಿಸಿದ್ದಾರೆ ಎಂಬುದನ್ನು ಭಾರತೀಯ ಇತಿಹಾಸದ ವಿಕೃತೀಕರಣ ಎಂಬ ಪುಸ್ತಕದ ಮೂಲಕ ನಾವು ತಿಳಿದುಕೊಳ್ಳಬಹುದು ಎಂದು ತಿಳಿಸಿದರು.

ಇಂದಿನ ಪಠ್ಯಪುಸ್ತಕವು ನೈಜಾಂಶಗಳನ್ನು ಹೊಂದಿದ್ದು ಹಲವು ರೀತಿಯ ಬದಲಾವಣೆಗಳನ್ನು ಹೊಂದಿದೆ. ಭಾರತದ ಇತಿಹಾಸ ಸಂಘರ್ಷದ ಇತಿಹಾಸವಾಗಿದೆ ಎಂಬುದನ್ನು ಶಿಕ್ಷಕರು ಅರಿತು ಬೋಧಿಸಬೇಕು. ವಿದ್ಯಾರ್ಥಿಗಳಲ್ಲಿ ಚಾರಿತ್ರ್ಯ ನಿರ್ಮಾಣಕ್ಕೆ ಶಿಕ್ಷಕರು ಸಹಾಯಕರಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯಾಧ್ಯಕ್ಷರಾದ ಶ್ರೀ ಹೆಚ್.ಎನ್.ಪಿ.ವಿಠಲ್ ಮಾತನಾಡಿ ರಾಷ್ಟ್ರೀಯ ಮಹಾಪುರುಷರ ಆದರ್ಶಗುಣಗಳನ್ನು ಮಕ್ಕಳಲ್ಲಿ ಬೆಳೆಸಲು ಶಿಕ್ಷಕರು ಮುಂದಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಗಳಾದ ಶ್ರೀ ಕೆ.ರಾಮನಗೌಡ ನೆರವೇರಿಸಿದರು. ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಶಶೀಲ.ಜಿ.ನಮೋಶಿ ಅತಿಥಿ ಭಾಷಣ ಮಾಡಿದರು. ಪ್ರಾಸ್ತಾವಿಕ ನುಡಿಯನ್ನು ಬಳ್ಳಾರಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಕೆ.ಗುಂಡಾಚಾರ್, ಪ್ರಾರ್ಥನೆಯನ್ನು ಅಶ್ವಿನಿ ಮತ್ತು ಅದಿತಿ, ಸ್ವಾಗತ ಮತ್ತು ಪರಿಚಯವನ್ನು ರಾಜ್ಯ ಉಪಾಧ್ಯಕ್ಷರಾದ ಶ್ರೀ ಆರ್.ಕೊಟ್ರಪ್ಪ, ಕಾರ್ಯಕ್ರಮದ ನಿರ್ವಹಣೆಯನ್ನು ಉಪನ್ಯಾಸಕರಾದ ಶ್ರೀ ವೀರೇಶ್.ವಿ. ನಿರ್ವಹಿಸಿದರು.

ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಪುಟ 4 ಕ್ಕೆ ➤**

➢ ಪುಟ 3 ರಿಂದ.....



# ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯತೆ ಅರಳಲಿ–ಪ್ರೊ॥ ಕೃ.ನರಹರಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹೊಸಪೇಟೆ, ತಾಲೂಕು ಘಟಕ ಆಯೋಜಿಸಿದ್ದ "ಒಂದು ದಿನದ ಶಿಕ್ಷಕರ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ, ಇಂದಿನ ಇತಿಹಾಸದಲ್ಲಿ ವಿಕೃತಿಗಳೇ ತುಂಬಿ ತುಳುಕುತಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯತೆ ಅರಳಿಸೋಣ ಎಂದು ಮಾಜಿ ವಿಧಾನ ಪರಿಷತ್ ಸದಸ್ಯರಾದ ಪ್ರೊ॥ ಕೃ.ನರಹರಿಯವರು ದಿನಾಂಕ: 21–01–2014 ರಂದು ಹೊಸಪೇಟೆಯ ಬಾಲಕಿಯರ ಪದವಿ ಪೂರ್ವಕಾಲೇಜಿನಲ್ಲಿ ಶಿಕ್ಷಕರಿಗೆ ಕರೆ ನೀಡಿದರು.

ಭಾರತ ಬಹಳ ಹಿಂದಿನಿಂದಲೂ ಅಗಾಧವಾದ ಸಾಧನೆಯನ್ನು ಎಲ್ಲಾ ಕ್ಷೇತ್ರಗಳಲ್ಲಿಯೇ ಸಾಧಿಸಿತ್ತು. ಹಾಗಾಗಿಯೇ ನಮ್ಮ ದೇಶಕ್ಕೆ ಬ್ರಿಟಿಷರು ಬಂದು ಈ ದೇಶದ ಶಿಕ್ಷಣದ ಪದ್ಧತಿಯನ್ನು ನಾಶಪಡಿಸುವ ಪ್ರಯತ್ನವನ್ನು ಲಾರ್ಡ್‌ಮೆಕಾಲೆ ಹಾಗೂ ಆತನ ಅನುಯಾಯಿಗಳು ಮಾಡಿದರು ಎಂದು ತಿಳಿಸಿದರು. ಉದ್ಘಾಟನೆಯಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಪುರುಷೋತ್ತಮ, ಪ್ರೌಢಶಾಲೆಯ ಉಪಪ್ರಾಂಶುಪಾಲರಾದ ಶ್ರೀಮತಿ ಸರಳಾ ಮನೋಹರ ಹಾಗೂ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಉಪಾಧ್ಯಕ್ಷರಾದ ಆರ್. ಕೊಟ್ರಪ್ಪ, ಜಿಲ್ಲಾ ಅಧ್ಯಕ್ಷರಾದ ಎ.ಗುಂಡಾಚಾರ್ ತಾಲೂಕು ಸಂಚಾಲಕರಾದ ಬಿ.ಮಲ್ಲಿಕಾರ್ಜುನ, ಶ್ರೀ ಅಶೋಕ ಜೀರೆ ಉಪಸ್ಥಿತರಿದ್ದರು.

ಹೊಸಪೇಟೆ ತಾಲೂಕಿನ 50 ಕ್ಕೂ ಹೆಚ್ಚು ಜನ ಶಿಕ್ಷಕರು ಪಾಲ್ಗೊಂಡಿದ್ದರು. ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮ ನಿರೂಪಣೆಯನ್ನು ವಿಠ್ಠಲ ಶಿಕ್ಷಕರು, ಸ್ವಾಗತ ಮತ್ತು ಪರಿಚಯವನ್ನು ಮಲ್ಲೇಶಪ್ಪ ಮುಖ್ಯಗುರುಗಳು ಮಾಡಿ ವಂದನಾರ್ಪಣೆಯನ್ನು ಮಲ್ಲಿಕಾರ್ಜುನ ಮಾಡಿದರು.

## ಬೆಂಗಳೂರು ಉತ್ತರ ಜಿಲ್ಲೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲಾ ಘಟಕವು ದಿನಾಂಕ 23.1.2014 ರಂದು ಬೆಂಗಳೂರು ಗಂಗಾನಗರದಲ್ಲಿರುವ ರಾಧಾಕೃಷ್ಣ ಆಂಗ್ಲ ಪ್ರೌಢಶಾಲೆಯಲ್ಲಿ ಸಂಕಲ್ಪ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಮಾಜ ಕಾರ್ಯಕರ್ತರಾದ ಶ್ರೀ ನ. ನಾಗರಾಜ್‌ರವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಅವರು ಜನವರಿ 13 ಸ್ವಾಮಿ ವಿವೇಕಾನಂದರ ಜನ್ಮದಿನ ಹಾಗೂ ಜನವರಿ 23 ನೇತಾಜಿ ಸುಭಾಷ್ ಚಂದ್ರಬೋಸ್‌ರ ಜನ್ಮದಿನವಾಗಿದ್ದು, ಈ ಮಾಸದಲ್ಲಿ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಅತಿ ಸೂಕ್ತ ಎಂದರು. ಮುಂದುವರೆದು ಶಿಕ್ಷಕರು ಸ್ವೀಕರಿಸಿದ ಸಂಕಲ್ಪ ನವ ಭಾರತ ನಿರ್ಮಾಣಕ್ಕೆ ಮಾರ್ಗವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಈ ದಿವ್ಯ ಚೇತನಗಳ ಕೊಡುಗೆಯನ್ನು ಶಿಕ್ಷಕರು ಸ್ಮರಿಸಿ, ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಬೇಕೆಂದು ಕೋರಿದರು. ಸಂಘದ ಹಿರಿಯರಾದ ಮಾನ್ಯ ಶ್ರೀ. ಕೃ ನರಹರಿಯವರು ಶಿಕ್ಷಕರಿಗೆ ಸಂಕಲ್ಪದ ಮಹತ್ವ ವಿವರಿಸಿ ಪ್ರತಿಜ್ಞೆ ಬೋಧಿಸಿದರು. ಸಂಘದ ಗೌ॥ ಅಧ್ಯಕ್ಷರಾದ ಜೆ.ಎಂ ಜೋಶಿಯವರು ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು. ಬೆಂಗಳೂರು ಉತ್ತರ ಜಿಲ್ಲಾ ಘಟಕದ ಕಾರ್ಯಕರ್ತರುಗಳು, ಪದಾಧಿಕಾರಿಗಳು ಹಾಗೂ ಶಿಕ್ಷಕರು ಈ ಸಮಾರಂಭದಲ್ಲಿ ಭಾಗವಹಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀ ಜಿ.ಎಸ್. ಕೃಷ್ಣಮೂರ್ತಿ ಯವರು ವಹಿಸಿದ್ದರು. ಜಿಲ್ಲಾ ಅಧ್ಯಕ್ಷರಾದ ಶ್ರೀ ಸೂಗೂರು ತಿಪ್ಪೇಸ್ವಾಮಿಯವರು ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು.

## ಬೆಂಗಳೂರು ದಕ್ಷಿಣ ಜಿಲ್ಲೆ

ದಿನಾಂಕ 21.1.2014 ರಂದು ಕೆ.ಆರ್. ಪುರಂ ನ ಸಿಲಿಕಾನ್ ಸಿಟಿ ಕಾಲೇಜಿನಲ್ಲಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಸಂಕಲ್ಪ ದಿನ ಹಾಗೂ ವಿವೇಕ ಯಾತ್ರೆಯ ಬಹುಮಾನ ವಿತರಣಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಿಲಿಕಾನ್ ಸಿಟಿ ಕಾಲೇಜಿನ ಮುಖ್ಯಸ್ಥರಾದ ಡಾ॥ ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಅವರು ಮಾತನಾಡುತ್ತಾ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಬೇಕಾಗಿದೆ ಹಾಗೂ ಈ ದಿಶೆಯಲ್ಲಿ ಶ್ರಮಿಸುತ್ತಿರುವ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ದಿಟ್ಟ ಹೆಜ್ಜೆಯನ್ನು, ಕಾರ್ಯವೈಖರಿಯನ್ನು ಶ್ಲಾಘಿಸಿದರು. ಇಂತಹ ಉತ್ತಮ ಕಾರ್ಯಕ್ರಮಗಳಿಗೆ ತಮ್ಮ ಸಹಕಾರ ಸದಾ ಇರುವುದೆಂದು ತಿಳಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಖಜಾಂಚಿಗಳಾದ ಜೆ.ಎಂ ಜೋಷಿಯವರು ಎಲ್ಲ ಶಿಕ್ಷಕರಿಗೂ ಸಂಕಲ್ಪ ಬೋಧಿಸಿದರು. ಅಧ್ಯಕ್ಷರಾದ ವಿ.ರಾಜ ಅವರು ಸಮಾರಂಭದ ಮಹತ್ವ ಹಾಗೂ ಔಪಚಾರಿಕತೆಯ ಬಗ್ಗೆ ವಿವರಿಸಿದರು. ವಿದ್ಯಾರ್ಥಿಗಳಿಗೆ, ಸ್ವಾಮಿ ವಿವೇಕಾನಂದರ 150ನೇ ಜಯಂತಿಯ ಆಚರಣೆಗಾಗಿ ಏರ್ಪಡಿಸಿದ್ದ 'ವಿವೇಕಾ ಯಾತ್ರಾ' ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಗಳಿಗೆ ಬಹುಮಾನ ವಿತರಿಸಲಾಯಿತು. ಜಿಲ್ಲಾ ಕಾರ್ಯದರ್ಶಿ ಗಳಾದ ಬಿ.ಎ. ಸುರೇಂದ್ರ ಅವರು ಎಲ್ಲರನ್ನೂ ಸ್ವಾಗತಿಸಿದರು. ವಿ. ಸೌಭಾಗ್ಯ ಕಾರ್ಯಕ್ರಮ ನಿರೂಪಿಸಿದರು. ■

# ಜೀವನದಿ - ಹೆಚ್.ಎನ್.ಆರ್



ಸಮಾಜದಲ್ಲಿ ಎಲ್ಲಾ ವೃತ್ತಿಗಳೂ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಸಮಾಜಕ್ಕೆ ಎಲ್ಲಾ ವೃತ್ತಿಗಳೂ ಅನಿವಾರ್ಯವೂ ಹೌದು. ಆದರೂ ಎರಡು ವೃತ್ತಿಗಳು ತುಂಬಾ ಪವಿತ್ರವೆಂದು ಗೌರವಿಸಲ್ಪಡುತ್ತದೆ. ಅದೆಂದರೆ ವೈದ್ಯ ವೃತ್ತಿ ಮತ್ತು ಶಿಕ್ಷಕ ವೃತ್ತಿ ಮಾತ್ರ. ವೈದ್ಯರು ಜನರ ಪ್ರಾಣವನ್ನು ಕಾಪಾಡಿದರೆ ಶಿಕ್ಷಕರು ವಿದ್ಯಾರ್ಥಿಗಳ ವ್ಯಕ್ತಿತ್ವ ಹಾಗೂ ಜೀವನವನ್ನು ಸುಂದರವಾಗಿ ರೂಪಿಸುತ್ತಾರೆ. ಆದ್ದರಿಂದಲೇ ವೈದ್ಯರು ಹಾಗೂ ಗುರುಗಳನ್ನು ದೇವರೆಂದು ಭಾವಿಸುವುದು. ಇಂತಹ ಪವಿತ್ರ ಶಿಕ್ಷಕ ವೃತ್ತಿಯಲ್ಲಿರುವವರೆಲ್ಲ ಆದರ್ಶಪ್ರಾಯರಾಗುವರೇ? ಉತ್ತರ ಎಲ್ಲರಿಗೂ ಗೊತ್ತಿರುವುದೇ !

ಆದರ್ಶ ಶಿಕ್ಷಕರು ಯಾರು? ಸರ್ಕಾರ ಗುರುತಿಸಿ, ಗೌರವಿಸುವವರು ಒಂದು ವರ್ಗವಾದರೆ ವಿದ್ಯಾರ್ಥಿಗಳ ಮೆಚ್ಚುಗೆಗೆ ಸದಾ ಪಾತ್ರರಾಗಿ ಸಾರ್ಥಕತೆಯನ್ನು ಪಡೆಯುವ ಗುರುವೃಂದ ಇನ್ನೊಂದು ವರ್ಗ. ಆ ಸಾರ್ಥಕತೆಯನ್ನು ಶಿಕ್ಷಕರಾಗಿ ಪಡೆದಿದ್ದಾರೆ ಶ್ರೀ ಹೆಚ್.ಎನ್.ಆರ್. ಚನ್ನೇನಹಳ್ಳಿ ಹಾಗೂ ನ್ಯಾಷನಲ್ ಪ್ರೌಢಶಾಲೆಯಲ್ಲಿ 30 ವರ್ಷಗಳಿಗೂ ಹೆಚ್ಚು ಕಾಲ ಅಧ್ಯಾಪಕರಾಗಿ ಶ್ರೀ ಹೆಚ್.ಎನ್.ಆರ್. ಸೇವೆ ಸಲ್ಲಿಸಿದ್ದಾರೆ. ಅವರು ಪಾಠಮಾಡಿದ ಅಷ್ಟೂ ವರ್ಷಗಳ ತಮ್ಮ ವಿದ್ಯಾರ್ಥಿಗಳ ಒಳಿತಿಗಾಗಿ ಶ್ರಮಿಸಿರುವುದು, ಅವರ ವಿದ್ಯಾರ್ಥಿಗಳ ಬಗೆಗಿನ ಕಾಳಜಿ ಅತ್ಯಂತ ಸಹಜ. ಆದರೆ ಶ್ರೀ ಹೆಚ್.ಎನ್.ಆರ್.ರವರು ತಮ್ಮ ನಿವೃತ್ತಿಯ ನಂತರವೂ, ವಿದ್ಯಾರ್ಥಿಗಳು ಎಲ್ಲಿದ್ದರೂ ಅವರ ಸಂಪರ್ಕವನ್ನಿಟ್ಟುಕೊಂಡು ಅವರ ಬೆಳವಣಿಗೆಗಳ ಬಗ್ಗೆ ವಿಚಾರಿಸುತ್ತಾರೆ. ಇದು ಒಬ್ಬಿಬ್ಬರ ಬಗ್ಗೆ ಅಲ್ಲ. ನೂರಾರು ವಿದ್ಯಾರ್ಥಿಗಳ ವಿಷಯದಲ್ಲಿ. ಆದ್ದರಿಂದಲೇ ಶ್ರೀ ಹೆಚ್.ಎನ್.ಆರ್.ರವರ ಎಲ್ಲಾ ವಿದ್ಯಾರ್ಥಿಗಳೂ ಈಗಲೂ ಅವರನ್ನು ಪ್ರೀತಿಸುತ್ತಿರುವುದು, ಗೌರವಿಸುತ್ತಿರುವುದು. ಕೇವಲ ಗಣಿತ, ವಿಜ್ಞಾನವನ್ನು ಮಾತ್ರವೇ ಪಾಠ ಮಾಡದೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಗುಣಗಳನ್ನು ಬೋಧಿಸುವುದು ಶ್ರೀ ಹೆಚ್.ಎನ್.ಆರ್.ರವರ ವಿಶೇಷ.

ಶ್ರೀ ನಾಗಭೂಷಣರಾವ್ ಅವರ ಇನ್ನೊಂದು ಕಾರ್ಯಕ್ಷೇತ್ರ ಶಿಕ್ಷಕ ಸಂಘ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕೆಲಸಗಳಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿ ಕೊಂಡವರು. ಎ.ಬಿ.ಆರ್.ಎಸ್.ಎಂ, ಮಾಧ್ಯಮಿಕ ಶಿಕ್ಷಕ ಸಂಘದ ಪ್ರಾಂತೀಯ ಕಾರ್ಯಕಾರಿಣಿ ಯಲ್ಲಿನ ಶ್ರೀ ಹೆಚ್.ಎನ್.ಆರ್. ವಿಚಾರಗಳು ಬೇರೆಯವರಿಗೆ ಸ್ಫೂರ್ತಿದಾಯಕ, ಅನುಸರಣೀಯ. ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲೆಯ ಬೆನ್ನೆಲುಬಾಗಿ ನಿಂತು ಮುನ್ನಡೆಸಿ ಪ್ರಾಂತ, ಅಷ್ಟೇ ಏಕೆ ರಾಷ್ಟ್ರದ ಹಂತದಲ್ಲಿ ಗುರುತಿಸುವಂತಾಯಿತು. ವಿಜ್ಞಾನ ಪ್ರಪಂಚಕ್ಕೆ ಭಾರತದ ಕೊಡುಗೆಯ ಭಿತ್ತಿ ಚಿತ್ರಗಳ ತಯಾರಿಕೆ, ರಾಷ್ಟ್ರಪುನರ್‌ನಿರ್ಮಾಣಕ್ಕಾಗಿ ಇತಿಹಾಸ ಬೋಧನೆ ಕುರಿತ ವಿಚಾರ ಸಂಕಿರಣ, ಬಿಇಡಿ ಶಿಕ್ಷಕರ ಸಂಕಿರಣ, ಬೋಧನಾ ವಿಷಯಗಳ ಕುರಿತು ಕಾರ್ಯಗಾರಗಳು, ನಿಧಾನ ಕಲಿಕೆಯ ವಿದ್ಯಾರ್ಥಿಗಳಿಗಾಗಿ ವಿಶೇಷ ಬೋಧನಾ ತರಗತಿಗಳು, ಆಕಾಶವಾಣಿ ಹಾಗೂ ಎಫ್.ಎಂ. ಚಾನಲ್‌ಗಳಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷಾ ತಯಾರಿಯ ಪಾಠಗಳು .... ಹೀಗೆ ಹತ್ತು ಹಲವಾರು ರೀತಿಯಲ್ಲಿ ವಿಶಿಷ್ಟ ಕಾರ್ಯಕ್ರಮಗಳನ್ನು ರೂಪಿಸಿ ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿ, ಆ ಮೂಲಕ ಶಿಕ್ಷಕ ಸಂಘವನ್ನು ಎಲ್ಲರೂ ಗುರುತಿಸುವಲ್ಲಿ ಶ್ರೀ ಹೆಚ್.ಎನ್.ಆರ್. ಪಾತ್ರ ಪ್ರಮುಖವಾದುದು. 'ಶಿಕ್ಷಕ ಸಮಾಚಾರ' ಮಾಧ್ಯಮಿಕ ಶಿಕ್ಷಕ ಸಂಘದ ಮುಖವಾಣಿ. ಪತ್ರಿಕೆಯ ಸಂಕಷ್ಟ ಸಮಯದಲ್ಲಿ ಅದರ ಸಂಪಾದಕತ್ವದ ಹೊರೆಹೊತ್ತು 23 ವರ್ಷಗಳಿಂದ ಮುನ್ನಡೆಸಿದ್ದಾರೆ, ಮುನ್ನಡೆಸುತ್ತಿದ್ದಾರೆ. ಈ ಅವಧಿಯಲ್ಲಿ ಶ್ರೀ ಹೆಚ್.ಎನ್.ಆರ್. ಶಿಕ್ಷಕ ಸಮಾಚಾರವನ್ನು ಮಗನಂತೆ ಬೆಳೆಸಿ ಒಂದು ಸ್ಪಷ್ಟ ಸ್ವರೂಪವನ್ನು ನೀಡಿದ್ದಾರೆ. ಹೀಗೆ ಹೆಚ್ಚೆನ್ನಾರ್ ಕೆಲಸಗಳು ಸ್ಫೂರ್ತಿದಾಯಕ, ಸಂತೋಷದಾಯಕ.

ಇಂತಹ ಕ್ರಿಯಾಶೀಲ, ವಿದ್ಯಾರ್ಥಿಪ್ರಿಯ ಶ್ರೀ ಹೆಚ್.ಎನ್.ಆರ್. ಗೆ 70 ವರ್ಷಗಳು ತುಂಬಿದೆ. ಈ ಸುಸಂದರ್ಭದಲ್ಲಿ ಹೆಚ್.ಎನ್.ಆರ್. ಮನೆಯವರು 'ಭೀಮರಥ ಶಾಂತಿ' ಕಾರ್ಯಕ್ರಮ

**ಒಬ್ಬ ಶಿಕ್ಷಕನಿಗೆ ಎಲ್ಲಕ್ಕಿಂತ ಹೆಚ್ಚಿನ ಸಂತೋಷ ತೃಪ್ತಿ ನೀಡುವುದು. ಅವರ ಶಿಷ್ಯರ ಪ್ರೀತಿ, ಆದರಗಳು. ಶ್ರೀ ಹೆಚ್.ಎನ್.ಆರ್. 70 ರ ಶುಭ ಸಂದರ್ಭದಲ್ಲಿ ಅವರ ವಿದ್ಯಾರ್ಥಿಗಳೆಲ್ಲ ಸೇರಿ ಅಭಿನಂದನಾ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜಿಸಿದ್ದು ಎಲ್ಲರಿಗೂ ಹೆಚ್ಚಿನ ಸಂತಸವನ್ನು ನೀಡಿತು. ಅಭಿನಂದನೆ ಕೇವಲ ಭಾಷಣ, ಊಟಕ್ಕೆ ಮಾತ್ರ ಸೀಮಿತವಾಗಿರದೆ 'ಜೀವನದಿ' ಅಭಿನಂದನಾ ಗ್ರಂಥ ಸಮರ್ಪಣೆ, ಅದಕ್ಕಿಂತ ಹೆಚ್ಚಾಗಿ ಶ್ರೀ ಹೆಚ್.ಎನ್.ಆರ್. ಕುರಿತ ಸಾಕ್ಷಿಚಿತ್ರ ತಯಾರಿಸಿದುದು ತುಂಬಾ ವಿಶೇಷವಲ್ಲವೇ?**

ಪುಟ 17 ಕ್ಕೆ ➤

# ಆತಿಂಗನಾಳ್ ರಾಮರಾವ್ ವಾಸುದೇವಮೂರ್ತಿ



ಭಾರತದ ಸಿಲಿಕಾನ್ ತಂತ್ರಜ್ಞಾನದ ಪ್ರೊ. ಎ.ಆರ್ ವಾಸುದೇವಮೂರ್ತಿ ಕನ್ನಡಿಗರ ಹೆಮ್ಮೆಯ ವಿಜ್ಞಾನಿ. ಭಾರತದ ಪ್ರಾಚೀನ ವಿಜ್ಞಾನ, ತಂತ್ರಜ್ಞಾನ, ತತ್ವಶಾಸ್ತ್ರದ ಬಗ್ಗೆಯೂ ಪರಿಣಿತರಾಗಿದ್ದು ವಿಜ್ಞಾನ ಕ್ಷೇತ್ರದಲ್ಲಿ ಸುಪರಿಚಿತರಾಗಿದ್ದರು.

ಭಾರತದ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನಿಯಾಗಿ ಇವರು ಬರೆದದ್ದು ಇನ್ನೂರಕ್ಕೂ ಹೆಚ್ಚು ಸಂಶೋಧನಾತ್ಮಕ ಲೇಖನಗಳು. ತರಬೇತು ಮಾಡಿದ್ದು ಹಲವಾರು ಯುವ ವಿಜ್ಞಾನಿಗಳನ್ನು. ನಿತ್ಯದ ಕಾಯಕವಾಗಿ ಸ್ವೀಕರಿಸಿದ್ದು ಪ್ರತಿಷ್ಠಿತ ಹುದ್ದೆಗಳನ್ನು. ವಿದ್ಯಾರ್ಥಿಯಾಗಿದ್ದಾಗಲೇ ಹಲವು ಸಂಶೋಧನೆಗಳನ್ನು ನಡೆಸಿದ ರಸಾಯನ ಶಾಸ್ತ್ರದ ಮೇರು ವಿಜ್ಞಾನಿ, ವಾಸುದೇವಮೂರ್ತಿ.

ಸಿಲಿಕಾನ್ ಬಳಕೆಯ ಉಪಯುಕ್ತತೆಯನ್ನು ಮನಗಂಡು ಅದನ್ನು ಜನಪ್ರಿಯಗೊಳಿಸಿದವರೇ ವಾಸುದೇವಮೂರ್ತಿ. ಶಿಷ್ಯರ ಮೆಚ್ಚಿನ ಎ.ಆರ್.ವಿ. ಆಧುನಿಕ ಸಿಲಿಕಾನ್ ವಸ್ತುಗಳನ್ನು ಮೊದಲು ತಯಾರಿಸಿದ್ದು ಇವರೇ. ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ.ಜಿ. ಸೂರ್ಯನಾರಾಯಣ್ ಜೊತೆಗೂಡಿ ಇವರು ಉತ್ಪಾದಿಸಿದ ಸಿಲಿಕಾನ್ ಸಾಧನೆಗಳು ಅಂತರಾಷ್ಟ್ರೀಯ ಗುಣಮಟ್ಟ ಹೊಂದಿದ್ದವು. ಸಿಲಿಕಾನ್ ಟೆಟ್ರಕ್ಲೋರೈಡ್, ಟ್ರೈಕ್ಲೋರೋ ಸಿಲೇನ್, ಈಥೈಲ್ ಸಿಲಿಕೇಟ್ 40, ಫ್ಯೂಮ್ಡ್ ಸಿಲಿಕಾ, ಪಾಲಿಕ್ರಿಸ್ಟಲೈನ್ ಸಿಲಿಕಾನ್, ಸಿಲಿಕಾನ್ ಹರಳು ಹಾಗೂ ಸಿಲಿಕಾನ್ ಚಿಪ್‌ಗಳು ಎಲ್ಲಾ ವಾಸುದೇವಮೂರ್ತಿ ಅವರ ಕೊಡುಗೆ. ಸಿಲಿಕಾನ್ –40ರ ನೂರಾರು ಟನ್ ಸರಕು ಅಮೆರಿಕ, ಇಂಗ್ಲೆಂಡ್ ಮತ್ತು ಯುರೋಪಿನ ಹಲವು ದೇಶಗಳಿಗೆ, ಆಸ್ಟ್ರೇಲಿಯಾಗೆ, ಆಫ್ರಿಕದ ದೇಶಗಳಿಗೆ ರಫ್ತಾಗಿದ್ದು ಇವರಿಂದಾಗಿಯೇ.

ಪ್ರೊ. ವಾಸುದೇವಮೂರ್ತಿ ಉತ್ಕಟ ದೇಶಪ್ರೇಮಿಯೂ ಆಗಿದ್ದರು. ಇವರ ಸಂಶೋಧನಾ ಕಾರ್ಯ ನೋಡಿ ವಿದೇಶೀ ವಿಶ್ವವಿದ್ಯಾಲಯಗಳಿಂದ ಉನ್ನತ ವ್ಯಾಸಂಗಕ್ಕೆ ಅಹ್ವಾನಗಳು ಬಂದವು. ಆರು ವರ್ಷಗಳ ಅವಧಿಗೆ ಯುರೋಪ್‌ಗೆ ತೆರಳಿದರು. ಒಂದೂವರೆ ವರ್ಷಕ್ಕೆ ಹಿಂತಿರುಗಿದ್ದರು. 'ಅಲ್ಲಿ ಕಲಿಯಲು ಬೇಕಾಗುವ ಅತ್ಯುತ್ತಮ ಸೌಲ್ಯಭ್ಯಗಳೇನೋ ಇವೆ. ಆದರೆ ಕಲಿಯಬೇಕಾದ ವಿಷಯವೇನೂ ಇಲ್ಲ' ಸ್ವಲ್ಪ ಶ್ರಮವಾದರೂ ತಾಯ್ನೆಲದಲ್ಲಿಯೇ ಸಂಶೋಧನೆ ಮಾಡಿದ ತೃಪ್ತಿಬೇಕು, ಬೇಕಾದ್ದನ್ನು ಇಲ್ಲೇ ಕಲಿಯುತ್ತೇನೆ' ಎಂಬುದು ಇವರ ನಿರ್ಧಾರವಾಗಿತ್ತು, ಹಾಗೆಯೇ ಉಳಿದರು. ಪರಿಣಾಮ– ಭಾರತಕ್ಕೆ ಮನ್ನಣೆ, ಹಲವು ವಿದೇಶೀ ಸಂಸ್ಥೆಗಳ ಜೊತೆಗೆ ಜಂಟಿ ಕಾರ್ಯಾಚರಣೆ, ವಿಶ್ವದಾದ್ಯಂತ ಇವರ ಉಪನ್ಯಾಸಗಳು, ಸಾರ್ವಜನಿಕ ಮತ್ತು ಖಾಸಗಿ ಉದ್ದಿಮೆಗಳಿಗೆ ಇವರ ತಜ್ಞತೆಯ ಲಾಭ.

ಶಿಕ್ಷಣ ಕ್ಷೇತ್ರಕ್ಕೆ ಇವರ ಕೊಡುಗೆ ಅವಿಸ್ಮರಣೀಯ. ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಇವರ ವಿಜ್ಞಾನ ಬೋಧನೆ ಒಂದು ಅನುಭೂತಿಯ ಪರ್ವ. ದಿನಬಳಕೆಯ ವಿಜ್ಞಾನದ ಮಹತ್ವವನ್ನು ಜನಪ್ರಿಯಗೊಳಿಸಬೇಕೆಂಬ ಧ್ಯೇಯಕ್ಕೆ ಅನುಗುಣವಾಗಿ ಇವರು ನೀಡಿದ ಉಪನ್ಯಾಸಗಳು ನೂರಾರು. ಪ್ರೌಢಶಾಲೆಯಿರಲಿ, ವಿಜ್ಞಾನ ಸಂಸ್ಥೆಯೇ ಇರಲಿ, ಅಲ್ಲಲ್ಲಿಗೆ ತಕ್ಕಂತೆ ಇವರು ನೀಡಿದ ಉಪನ್ಯಾಸಗಳ ಲಾಭ ಅಪಾರ. 'ದೇಶಬಂಧು' ಎಂಬ ವಾರಪತ್ರಿಕೆಯಲ್ಲಿ 'ಸರಳ ವಿಜ್ಞಾನ' ಮಾಲೆಯಡಿ ನೂರಾರು ವಿಜ್ಞಾನ ಲೇಖನಗಳು ಇವರ ಲೇಖನಿಯಿಂದ ಹೊರಬಂದಿವೆ. ಕರ್ನಾಟಕ ವಿಜ್ಞಾನ ಪರಿಷತ್ತಿನ ಸ್ಥಾಪಕ ಸದಸ್ಯರು, ಸರ್ಕಾರದ ವಿಜ್ಞಾನ ಪುಸ್ತಕಗಳ ಪಠ್ಯ ಸುಧಾರಣೆಯಲ್ಲಿಯೂ ಸಕ್ರಿಯ ರಾಗಿದ್ದರು.

ಭಾರತದ ಸಂಸ್ಕೃತಿಯೆಂದರೆ ಪ್ರೊ. ಮೂರ್ತಿಯವರಿಗೆ ಅಪಾರ ಹೆಮ್ಮೆ. 'ಪೃಥ್ವಿಯ ಅತ್ಯಂತ ಹಳೆಯ ಮತ್ತು ಶ್ರೀಮಂತ ಸಂಸ್ಕೃತಿಯ ದೇಶ ಭಾರತ. ಇಲ್ಲಿನವರು ಬದುಕುಗಳನ್ನು ಕಾಣುವ ದೃಷ್ಟಿ ಅನುಪಮ' ಎನ್ನುತ್ತಿದ್ದರು. ವೃತ್ತಿಯಿಂದ ವಿಶ್ರಾಂತಿ ಪಡೆದರೂ ವೇದ, ಉಪನಿಷತ್ತುಗಳ ಅಧ್ಯಯನಕ್ಕೆ ತಮ್ಮ ಸಮಯವನ್ನು ಮೀಸಲಿಟ್ಟವರು, ಆದರೆ, ಅಲ್ಲಿಯೂ ಅವರು ಹುಡುಕಿದ್ದು ವಿಜ್ಞಾನವನ್ನೇ.

ವಾಸ್ವಿಕ್ ಪುರಸ್ಕಾರ, ಭಾರತೀಯ ವಿಜ್ಞಾನ ಮಂದಿರದ ಹೆಮ್ಮೆಯ ಗೌರವಾನ್ವಿತ ವಿದ್ಯಾರ್ಥಿ ಪುರಸ್ಕಾರ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಸರ್.ಎಂ.ವಿ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ಹಲವು ಸನ್ಮಾನಗಳಿಗೆ ಭಾಜನರಾಗಿದ್ದ ಪ್ರೊ.ಎ.ಆರ್ ವಾಸುದೇವಮೂರ್ತಿ, ತರೀಕೆರೆಯ ಅಚ್ಚ ಕನ್ನಡಿಗ, ಕರ್ನಾಟಕ ಹೆಮ್ಮೆಯ ವಿಜ್ಞಾನಿ ತಮ್ಮ ಎಂಭತ್ತೆಂಟನೆಯ ವಯಸ್ಸಿನಲ್ಲಿ ಇದೇ ಜನವರಿ ಹನ್ನೊಂದರಂದು ಭಾರತದ ಸಿಲಿಕಾನ್ ಕಣಿವೆಯಲ್ಲಿ ಲೀನರಾದರು. ಇವರಿಗೆ ಇದೊಂದು ನುಡಿ ನಮಸ್ಕಾರ.

**ಲೇಖನ : ನಂ.ನಾ.**

# 2014-15 "ಮಹಿಳಾ ವರ್ಷ" ಆಚರಣೆಗೆ ಕರೆ

2014 ಮಾರ್ಚ್ 1 ಮತ್ತು 2 ರಂದು ಕನ್ಯಾಕುಮಾರಿಯಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಕಾರ್ಯಕಾರಿಣಿ ಸಭೆಯನ್ನು ಏರ್ಪಡಿಸಲಾಗಿತ್ತು. ವಿವಿಧ ರಾಜ್ಯಗಳಲ್ಲಿ ನಡೆದ ಶಿಕ್ಷಕ ಸಂಘಟನೆಗಳ ಕಾರ್ಯಕ್ರಮ ವರದಿಯನ್ನು ಪಡೆಯಲಾಯಿತು. ಕೆಳಕಂಡ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

1. 2014-15 ವರ್ಷವನ್ನು ಮಹಿಳಾ ವರ್ಷವೆಂದು ಆಚರಿಸಬೇಕೆಂದು ನಿರ್ಣಯಿಸಲಾಯಿತು. ವರ್ಷವಿಡೀ ಮಹಿಳೆಯರಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುವುದರ ಮೂಲಕ ಸಂಘಟನೆಯಲ್ಲಿ ಶಿಕ್ಷಕಿಯರ ಸಂಖ್ಯೆಯನ್ನು ಹೆಚ್ಚಿಸಲು ತೀರ್ಮಾನಿಸಲಾಯಿತು.
2. ಶಿಕ್ಷಣದಲ್ಲಿ ಮೌಲ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಯೋಜನೆ ಹಾಗೂ ಕಾರ್ಯವಿಸ್ತಾರ ಮಾಡಬೇಕೆಂದು ಸೂಚಿಸಲಾಯಿತು.
3. ಮೌಲ್ಯಾತ್ಮಕ ಶಿಕ್ಷಣವನ್ನು ಹೆಚ್ಚಿಸುವ ಯೋಜನೆಯ ಕಾರ್ಯಗಾರವನ್ನು 2014ರ ಜೂನ್ 13ರಿಂದ 15ರ ವರೆಗೆ ದೆಹಲಿಯಲ್ಲಿ ಆಯೋಜಿಸಲು ತೀರ್ಮಾನಿಸಲಾಯಿತು. ಈ ಕಾರ್ಯಾಗಾರದಲ್ಲಿ ಭಾಗವಹಿಸಲು ಪ್ರತಿ ರಾಜ್ಯದಿಂದ 5 ಜನ ಸಂಪನ್ಮೂಲ ವ್ಯಕ್ತಿಗಳನ್ನು ಕಳುಹಿಸಲು ಸೂಚಿಸಲಾಯಿತು.

ಈ ಎರಡು ದಿನಗಳ ಕಾರ್ಯಕಾರಿಣಿಯ ಒಂದು ಅವಧಿಯನ್ನು ವಿವೇಕಾನಂದ ಕೇಂದ್ರದ ಉಪಾಧ್ಯಕ್ಷರಾದ ಮಾನ್ಯ ನಿವೇದಿತಾ ಭಿಡೆಯವರು ನಡೆಸಿಕೊಟ್ಟರು. ಅವರು ಶಿಕ್ಷಣದಲ್ಲಿ ಮೌಲ್ಯ ಬಿಂಬಿಸುವಿಕೆ, ಹೆಚ್ಚಿಸುವಿಕೆ ಇವುಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಶಿಕ್ಷಣದಲ್ಲಿ ಮೌಲ್ಯದ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಪರಿಣಾಮವಾಗಿ ವಿಶಾಲ ದೃಷ್ಟಿಕೋನ, ಏಕಾತ್ಮ ಜೀವನ ದರ್ಶನವಾಗಿ ಆತ್ಮ ಚೇತನ ವೃದ್ಧಿಯಾಗುತ್ತದೆ. ಆದ ಕಾರಣ ಉನ್ನತ ಧ್ಯೇಯಕ್ಕಾಗಿ ಶಿಕ್ಷಣದಲ್ಲಿ ಜೀವನ ಮೌಲ್ಯವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಯಮ ನಿಯಮಗಳ ವಿವರಣೆ, ಅದರ ಪಾಲನೆಯಿಂದಾಗುವ ಸತ್ಪರಿಣಾಮಗಳನ್ನು ಸುಲಲಿತವಾಗಿ ಅರ್ಥೈಸಿದರು. ಅಖಿಲ ಭಾರತೀಯ ರಾಷ್ಟ್ರೀಯ ಮಹಾಸಂಘದ ಸಂರಕ್ಷಕರಾದ ಶ್ರೀ.ಕೃ ನರಹರಿಯವರು ಸಮಾರೋಪ ಭಾಷಣ ಮಾಡಿ ಸಂಘದ ಚಟುವಟಿಕೆ ಹೆಚ್ಚಿಸುವ ಬಗ್ಗೆ ತಿಳಿಸಿದರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಎಲ್ಲಾ ರಾಜ್ಯಗಳಿಂದ 80ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದುದು ವಿಶೇಷ.

**ವರದಿ: ಶ್ರೀಮತಿ ಆರ್.ಸೀತಾಲಕ್ಷ್ಮಿ**

# ಶಿಕ್ಷಣದ ಕೇಸರೀಕರಣದ ಆರೋಪ ನಿರಾಧಾರ - ಸರ್ವೋಚ್ಚ ನ್ಯಾಯಾಲಯ

ಎಡಪಂಥಿ ಬುದ್ಧಿಜೀವಿಗಳು ಮತ್ತು ಜಾತ್ಯಾತೀತವಾದಿಗಳು 2001 ರಲ್ಲಿ ರಾಷ್ಟ್ರೀಯ ಶೈಕ್ಷಣಿಕ ಅನುಸಂಧಾನ ಮತ್ತು ಪ್ರಶಿಕ್ಷಣ ಪರಿಷತ್ ಮೂಲಕ ಪ್ರಸ್ತುತ ಪರಿಷ್ಕರಣೆಯಾಗಿರುವ ಪಠ್ಯಕ್ರಮ ಕೇಸರೀಕರಣಗೊಂಡಿದೆಯೆಂದು ಸರ್ವೋಚ್ಚ ನ್ಯಾಯಾಲಯಕ್ಕೆ ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಾಕಿದರು. ಆ ಅರ್ಜಿಯ ವಿಚಾರಣೆ ನಡೆಸಿ ಸರ್ವೋಚ್ಚ ನ್ಯಾಯಾಲಯವು ಈ ತರಹದ ಆರೋಪಗಳು ನಿರಾಧಾರವೆಂದು ಐತಿಹಾಸಿಕ ತೀರ್ಪನ್ನು ನೀಡಿದೆ.

ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಎಮ್. ಬಿ. ಶಾಹರವರ ಅಧ್ಯಕ್ಷತೆಯಲ್ಲಿ ರಚಿತ ತ್ರಿಸದಸ್ಯ ಪೀಠವು ಈ ತೀರ್ಪನ್ನು ನೀಡುತ್ತಾ ಹೇಳಿದ್ದೇನೆಂದರೆ " ಮನುಷ್ಯನಲ್ಲಿರುವ ಪಶುಭಾವನೆಯನ್ನು ನಿಯಂತ್ರಣ ಮಾಡಿ ಸಭ್ಯ, ಸುಸಂಸ್ಕೃತ ಸಮಾಜದ ನಿರ್ಮಾಣಕ್ಕಾಗಿಯೇ ಧರ್ಮವೆಂಬುದು ಅಸ್ತಿತ್ವದಲ್ಲಿದೆ. ಧರ್ಮದ ಆಧಾರದಿಂದಲೇ ಮನುಷ್ಯ ಸಭ್ಯ ಸಮಾಜದಲ್ಲಿ ಯಾವ ಮೌಲ್ಯಗಳೊಂದಿಗೆ ಬದುಕುತ್ತಿದ್ದಾನೆಂದು ನಿರ್ಧಾರವಾಗುತ್ತದೆ. ಇದನ್ನೇ ಪಠ್ಯಕ್ರಮದಲ್ಲಿ ಅಳವಡಿಸಿಕೊಂಡರೆ ಯಾವುದೇ ತೊಂದರೆಯಾಗುವುದಿಲ್ಲ ಏಕೆಂದರೆ ಅದು ಸಂವಿಧಾನವನ್ನಾಗಲೀ ಅಥವಾ ಯಾವುದೇ ವಿಧಿಗಳ ಉಲ್ಲಂಘನೆಯನ್ನು ಮಾಡುವುದಿಲ್ಲ. ಅಲ್ಲದೇ ಯಾವುದೇ ನೈತಿಕ ಮೌಲ್ಯಗಳಿಗೆ ತಡೆಯೊಡ್ಡುವುದಿಲ್ಲ. ವಿಭಿನ್ನ ಉಪಾಸನಾ ಪದ್ಧತಿಗಳ ಜ್ಞಾನದಿಂದ ಸಮಾಜದಲ್ಲಿ ದುವಿಧತೆ ಉಂಟಾಗುತ್ತದೆನ್ನುವ ಭಾವನೆ ಪೂರ್ಣ ತಪ್ಪು. ಆದರೆ ವಿಭಿನ್ನ ಧರ್ಮ ದರ್ಶನದ ಜ್ಞಾನ ಸಮುದಾಯದ ನಡುವೆ ಸದ್ಭಾವನೆಯನ್ನುಂಟು ಮಾಡಲು ಅವಶ್ಯಕವಾಗಿದೆ. ಏಕೆಂದರೆ ಪಥಭ್ರಷ್ಟ ಸ್ವಾರ್ಥಿಗಳಿಂದ ಹರಡಿರುವ ಅಜ್ಞಾನವೇ ವಿದ್ರೋಹದ ಹುಟ್ಟು. ಆದ್ದರಿಂದ ಅರ್ಜಿದಾರರ ಕೇಸರೀಕರಣದ ಆರೋಪ ನಿರಾಧಾರ ಮತ್ತು ಪೂರ್ವಾಗ್ರಹಪೀಡಿತ ಎಂದು ಅಭಿಪ್ರಾಯ ಪಟ್ಟು ಅರ್ಜಿಯನ್ನು ತಳ್ಳಿಹಾಕಿತು. ■

# ಇಂಜಿನಿಯರ್, ವಿಜ್ಞಾನಿ - ರಾಜೇಶ್ವರಿ ಚಟರ್ಜಿ



ಭಾರತೀಯ ವಿಜ್ಞಾನ ಸಂಸ್ಥೆಯ ಮೊಟ್ಟಮೊದಲ ಪ್ರಾಧ್ಯಾಪಕಿ (ಪ್ರೊಫೆಸರ್) ಎಂಬ ಹೆಮ್ಮೆಗೆ ಪಾತ್ರರಾಗಿದ್ದವರು. ಆತ್ಮವಿಶ್ವಾಸದ ಪ್ರತೀಕ. ಸ್ವಂತಿಕೆಗೆ ಮತ್ತೊಂದು ಹೆಸರು. ಆತ್ಮಸ್ಥೈರ್ಯವನ್ನು ಸದಾ ಜೊತೆಗಿರಿಸಿಕೊಂಡು ಧೀಮಂತರಾಗಿ ಬದುಕಿದವರು.

ಕನ್ನಡದ 'ಶ್ರೀ' ಎಂದೇ ಹೆಸರಾಗಿರುವ ಬಿ.ಎಂ. ಶ್ರೀಕಂಠಯ್ಯನವರ ಕಿರಿಯ ಸೋದರ ಬಿ.ಎಂ ಶಿವರಾಮಯ್ಯನವರ (ನಂಜನಗೂಡಿನಲ್ಲಿ ವಕೀಲರು) ಮಗಳು, ಮಹಿಳಾ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಅಗ್ರಗಣ್ಯರಾದ ಕಮಲಮ್ಮ ದಾಸಪ್ಪನವರ (ತಾಯಿಯ ತಾಯಿ) ಮೊಮ್ಮಗಳು ರಾಜೇಶ್ವರಿ, ಸಾಂಸ್ಕೃತಿಕ ಹಿರಿಮೆಯ, ಮೌಲ್ಯಯುತ, ಸ್ವಾಭಿಮಾನೀ ಬದುಕನ್ನು ನಡೆಸಿದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ಮಹಿಳೆಯರಿಗೆ ಎಂದಿಗೂ ಸ್ಫೂರ್ತಿದಾಯಕರಾಗಿ ಬಾಳಿದ ಇವರ ಜೀವನಗಾಥೆ ಇಂಜಿನಿಯರಿಂಗ್ ಶಿಕ್ಷಣ ಬಯಸುವ, ಅಷ್ಟೇ ಏಕೆ ಎಲ್ಲರಿಗೂ ಆದರ್ಶಪ್ರಾಯ ಹಾಗೂ ಪ್ರೇರಣದಾಯಕ.

ಒಂಭತ್ತು ದಶಕಗಳಿಗೂ ಹಿಂದೆ 1922 ರ ಜನವರಿ 24 ರಂದು ಜನನ. ಹೆಣ್ಣುಮಕ್ಕಳು ಕಾಲೇಜಿಗೆ ಹೋಗುವುದಾಗಲೀ, ಉನ್ನತ ಶಿಕ್ಷಣ ಪಡೆಯುವುದಾಗಲೀ, ಉದ್ಯೋಗಸ್ಥರಾಗುವುದಾಗಲೀ ಅಪರೂಪವಾಗಿದ್ದ ಸಾಮಾಜಿಕ ವ್ಯವಸ್ಥೆಯ ಕಾಲ. ಜೀವನ ನಿರ್ವಹಣೆಗೆ ಉದ್ಯೋಗ ಮಾಡುತ್ತಿದ್ದವರೆಂದರೆ ಮೇಲ್ಜಾತಿಯ ಕುಟುಂಬದ ವಿಧವೆಯರು, ಪರಿತ್ಯಕ್ತೆಯರು ಮಾತ್ರವಾಗಿತ್ತು. ಆದರೆ, ಶಿಕ್ಷಣ ಪಡೆದು ಅರ್ಥಪೂರ್ಣ ಬದುಕಿನ ಮಹತ್ವ ತಿಳಿದಿದ್ದ ರಾಜೇಶ್ವರಿಯ ಮನೆಯವರು ಅವರನ್ನು ಉನ್ನತ ಶಿಕ್ಷಣ ಪಡೆಯುವಂತೆ ಪ್ರೋತ್ಸಾಹಿಸಿದ್ದರು. 1942 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಗಣಿತ ವಿಷಯದೊಂದಿಗೆ ಆನರ್ಸ್ ಪದವಿ, ಮರುವರ್ಷವೇ ಸ್ನಾತಕೋತ್ತರ ಪದವಿ. 1947 ರಲ್ಲಿ ಭಾರತ ಸರ್ಕಾರದ ಸ್ಕಾಲರ್ ಶಿಪ್ ಪಡೆದು ಅಮೆರಿಕ ದತ್ತ ಪಯಣ. 1952 ರಲ್ಲಿ ಮಿಷಿಗನ್ ವಿಶ್ವವಿದ್ಯಾಲಯದಿಂದ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ನಲ್ಲಿ ಎಂ. ಎಸ್.ಸಿ. ಮತ್ತು ಪಿ.ಹೆಚ್.ಡಿ ಪದವಿ. 1953 ಕ್ಕೆ ಭಾರತೀಯ ವಿಜ್ಞಾನ ಸಂಸ್ಥೆಗೆ ಕಾಲಿಟ್ಟು 1982 ರಲ್ಲಿ ನಿವೃತ್ತಿ, ಅಲ್ಲಿಯೇ ಪ್ರೊಫೆಸರ್ ಆಗಿದ್ದ ಸಿಸಿರ್ ಕುಮಾರ್ ಚಟರ್ಜಿಯವರನ್ನು 1953 ರಲ್ಲಿ ವಿವಾಹವಾಗಿ ರಾಜೇಶ್ವರಿ ಚಟರ್ಜಿಯವರಾಗಿದ್ದರು.

**2014 ಮಹಿಳಾ ಸಬಲೀಕರಣ ವರ್ಷವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಮತ್ತು ಇದೇ ಫೆಬ್ರವರಿ 28 ರಂದು 'ವಿಜ್ಞಾನ ದಿನ' ವೆಂದು ಆಚರಿಸುವ ಪ್ರಯುಕ್ತ ಕನ್ನಡದ ಹೆಮ್ಮೆಯ ಮಹಿಳಾ ವಿಜ್ಞಾನಿಯ ಪರಿಚಯ ರಾಜೇಶ್ವರಿ ಚಟರ್ಜಿ – ಕರ್ನಾಟಕದ ಮೊಟ್ಟಮೊದಲ ಮಹಿಳಾ ಇಂಜಿನಿಯರ್.**

ಭಾರತೀಯ ವಿಜ್ಞಾನ ಮಂದಿರದಲ್ಲಿನ ತಮ್ಮ ಮೂವತ್ತು ವರ್ಷಗಳ ಸೇವಾವಧಿಯಲ್ಲಿ ಇವರು ಬರೆದು ಪ್ರಕಟಗೊಂಡಿದ್ದು ನೂರಕ್ಕೂ ಹೆಚ್ಚು ಸಂಶೋಧನಾ ಲೇಖನಗಳು. ಉನ್ನತ ಗುಣಮಟ್ಟದ ಆರು ಪುಸ್ತಕಗಳು. ಇವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ ಪದವಿ ಪಡೆದವರು ಇಪ್ಪತ್ತು ಮಂದಿ ವಿದ್ಯಾರ್ಥಿಗಳು.

ಮೈಕ್ರೋವೇವ್ಸ್ ಅಧ್ಯಯನ ವಿಭಾಗಕ್ಕೆ ಇವರ ಕೊಡುಗೆ ಅಪಾರ. ವಿದ್ಯಾರ್ಥಿಗಳು ಇವರಲ್ಲಿ ಕಂಡದ್ದು ಕೇವಲ ಪ್ರೀತಿಯ ಅಚ್ಚುಮೆಚ್ಚಿನ ಪ್ರೊಫೆಸರ್ ಮಾತ್ರವಲ್ಲ ತಾಯಿಯ ವಾತ್ಸಲ್ಯವನ್ನು ಸಹ. ಮಾನವೀಯತೆಯ ಮೌಲ್ಯಗಳನ್ನು ಗೌರವಿಸುತ್ತಿದ್ದ, ಪ್ರೀತಿಸುತ್ತಿದ್ದ ಇವರು ಯಾರೇ ತೊಂದರೆಯಲ್ಲಿದ್ದಾರೆಂದು ತಿಳಿದೊಡನೆ ತಮ್ಮಿಂದಾದ ನೆರವು ನೀಡಲು ಮುಂದಾಗುತ್ತಿದ್ದರು. ಅಷ್ಟೇ ಅಲ್ಲ, ಅವರೊಂದಿಗೆ ಸತತ ಸಂಪರ್ಕದಲ್ಲಿದ್ದು, ಅವರ ಆತ್ಮಸ್ಥೈರ್ಯವನ್ನು ಬಲಪಡಿಸಲು ಪ್ರಯತ್ನಿಸುತ್ತಿದ್ದರು.

ಬ್ರಿಟಿಷ್ ಇನ್ಸ್ಟಿಟ್ಯೂಟ್ ಆಫ್ ರೇಡಿಯೋ ಇಂಜಿನಿಯರ್ಸ್ ನೀಡುವ ಮೌಂಟ್ ಬ್ಯಾಟನ್ ಅವಾರ್ಡ್, ಮೇಘನಾದ ಸಾಹ ಮತ್ತು ರಾಮ್‌ಲಾಲ್ ವಾಧ್ವಾ ಅವಾರ್ಡ್ (ಇನ್ಸ್ಟಿಟ್ಯೂಷನ್ ಆಫ್ ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಶನ್ಸ್ ಇಂಡಿಯ) ಮತ್ತು ಇನ್ಸ್ಟಿಟ್ಯೂಶನ್ ಆಫ್ ಇಂಜಿನಿಯರ್ಸ್) ಇವರನ್ನು ಗೌರವಿಸಿದ್ದವು. ದೇಶದ ಹಲವಾರು ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಪರೀಕ್ಷಾ ಮಂಡಳಿಗಳ ಸದಸ್ಯರಾಗಿದ್ದ ಹೆಗ್ಗಳಿಕೆ ಇವರದು. ಆದರೆ ಕರ್ನಾಟಕದ ವಿಶ್ವವಿದ್ಯಾಲಯಗಳಿಂದ ಮಾತ್ರ ಇವರಿಗೆ ಆಹ್ವಾನ ಬರಲಿಲ್ಲವೆಂಬುದು ಬೇಸರದ ಸಂಗತಿ.

ಒಬ್ಬ ವಿಜ್ಞಾನಿಯಾಗಿ, ಶಿಕ್ಷಕಿಯಾಗಿ, ಕುಟುಂಬದಲ್ಲಿ ಪತ್ನಿಯಾಗಿ, ತಾಯಿಯಾಗಿ, ಸ್ನೇಹಿತೆಯಾಗಿ ಎಲ್ಲ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಒಬ್ಬ ವಿಶಿಷ್ಠ ಮಹಿಳೆಯೆನಿಸಿದ ರಾಜೇಶ್ವರಿ ಚಟರ್ಜಿಯವರು ತಮ್ಮ ಎಂಭತ್ತೆಂಟನೇ ವಯಸ್ಸಿನಲ್ಲಿ 2010, ಸೆಪ್ಟೆಂಬರ್ 3 ರಂದು ಬದುಕಿನಾಚೆಗೆ ಧೈರ್ಯದಿಂದಲೇ ಹೆಜ್ಜೆಯಿಟ್ಟರು.

✍ **ನಂ. ನಾಗಲಕ್ಷ್ಮಿ**

# ವಿವೇಕಾನಂದರು ಹುಟ್ಟದೇ ಇದ್ದಿದ್ದರೆ.?!!

■ ಭೀಮಸೇನ್ ಪುರೋಹಿತ್, ಎಂಟೆಕ್ ವಿದ್ಯಾರ್ಥಿ

"ಅಯ್ಯೋ, ನಮ್ಮ ಭಾರತದಂತಹ ದರಿದ್ರ ದೇಶ ಇನ್ನೊಂದಿಲ್ಲ. ಇಲ್ಲಿರುವಷ್ಟು ಮೂಢ-ಕಂದಾಚಾರಗಳಂತೂ ಬೇರೆಲ್ಲೂ ಸಿಗೋದಿಲ್ಲ. ಅಜ್ಞಾನದ ಅಂಧಕಾರದಲ್ಲೇ ಈ ದೇಶ ಮುಳುಗಿ ಹೋಗಿದೆ. ಅಕಸ್ಮಾತ್ ಬ್ರಿಟಿಷರು ಬರದೆ ಹೋಗಿದ್ದರೆ, ಈ ದೇಶ ನಿಶ್ಶೇಷವಾಗುತ್ತಿತ್ತೇನೋ. ಛೆ. ಇನ್ನೊಂದು ಜನ್ಮ ಅಂತಿದ್ರೆ, ಬೇರೆ ದೇಶದಲ್ಲಿ ಹುಟ್ಟಿಸು ಅಂತ ಆ ದೇವರಲ್ಲಿ ಪ್ರಾರ್ಥಿಸುತ್ತೇನೆ."..!!!

ಅಬ್ಬಾ, ಎಂಥ ಕಠೋರ ನುಡಿಗಳಿವು..!! ತನ್ನತನವೇ ಸತ್ತು ಸ್ವಾಭಿಮಾನಶೂನ್ಯನಾಗಿ ಪ್ರಲಪಿಸುವ ವ್ಯಕ್ತಿಯೊಬ್ಬನಿಂದ ಮಾತ್ರ ಹೊರಡ ಬಹುದಾದ ವಾಕ್ಯಗಳು.. ಬಹುಶಃ ಇಂದು 'ಭಾರತ', 'ರಾಷ್ಟ್ರೀಯತೆ','ಸಂಸ್ಕಾರ' ಎಂದು ಮಾತನಾಡುವ ನಾವೂ, ಹಾಗೆಯೇ ಅಭಿಮಾನಶೂನ್ಯರಾಗಿ ಬದುಕುತ್ತಿದ್ದೇವೇನೋ, ಅಕಸ್ಮಾತ್ "ವಿವೇಕಾನಂದರು ಹುಟ್ಟದೇ ಇದ್ದಿದ್ದರೆ"..!!!



ವಿವೇಕಾನಂದರು ಹುಟ್ಟದೇ ಇದ್ದಿದ್ದರೆ.? ಎಂಬ ಪ್ರಶ್ನೆಯೇ ನಮ್ಮನ್ನೊಮ್ಮೆ ಆತಂಕಕ್ಕೀಡು ಮಾಡುತ್ತದೆ. ಆ ಮಹಾಪುರುಷ ನಿಂದ ಆದ ಪರಿವರ್ತನೆಗಳಾದರೂ ಎಂಥದ್ದು.! ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಹೀಗೆ ಎಲ್ಲ ಪರಿಧಿಯಲ್ಲೂ ಪಸರಿಸಿರುವ ಅವರ ಶಿಖರೋನ್ನತವಾದ ಸಾಧನೆಗೆ ನಾವು ಬೆರಗಾಗಬೇಕಷ್ಟೇ. ಮಹಾರಾಷ್ಟ್ರದ ಕೇಸರಿ ಬಾಲಗಂಗಾಧರ ತಿಲಕರು ಬಂಗಾಳಕ್ಕೆ ಹೋಗಿದ್ದಾಗ, ನೆರೆದಿದ್ದ ಅಪಾರ ಜನಸ್ತೋಮದ ಎದುರಿಗೆ ಅವರು ಉದ್ಗರಿಸಿದ್ದು "ಈ ದೇಶಕ್ಕೆ ರಾಷ್ಟ್ರೀಯ ಭಾವನೆಯನ್ನು ತಂದುಕೊಟ್ಟ ವ್ಯಕ್ತಿ ಯಾರಾದರೂ ಇದ್ದರೆ ಅವರು ವಿವೇಕಾನಂದರೇ. ಅವರೇ ರಾಷ್ಟ್ರೀಯತೆಯ ಪಿತಾಮಹ" ಅಂತ. ಸತ್ಯವಲ್ಲವೇ. ಕೇವಲ ಭಾರತದಲ್ಲಷ್ಟೇ ಅಲ್ಲ, ಸಾಗರದಾಚೆಯೂ ಭಾರತೀಯತೆಯ ಕಂಪನ್ನು ಹರಡಿದ ಧೀರ ಅವರು.

ಪರಕೀಯರು ಈ ದೇಶಕ್ಕೆ ಬಂದು ಕೇವಲ ಆರ್ಥಿಕವಾಗಿ ಅಷ್ಟೇ ಅಲ್ಲ, ಬೌದ್ಧಿಕವಾಗಿಯೂ ನಮ್ಮನ್ನು ದಿವಾಳಿ ಎಬ್ಬಿಸಿದ್ದರು. ಭಾರತದ ಆಧ್ಯಾತ್ಮಿಕ ಗ್ರಂಥಗಳಾದ ವೇದ-ಭಾರತಗಳನ್ನು ಓದಲು ಅವರು ಪಟ್ಟ ಶ್ರಮಕ್ಕೆ ಒಂದು ಮೆಚ್ಚುಗೆ ಸೂಚಿಸಬಹುದಾದರೂ, ಅವರು ತಮ್ಮದೇ ವೈಚಾರಿಕ ಕೋನಗಳಿಂದ ಅದನ್ನು ವ್ಯಾಖ್ಯಾನಿಸಲು ಶುರುಮಾಡಿದರು. ವೈವಿಧ್ಯತೆಯನ್ನು ಕಂಡೇ ಇರದ ಆ ಜನ, ಇಲ್ಲಿನ ನೂರೆಂಟು ದೇವತೆಗಳು, ಊರೂರಿಗೂ ಬದಲಾಗುವ ಆಚರಣೆಗಳನ್ನೆಲ್ಲ ನೋಡಿ ಗೊಂದಲಕ್ಕೀಡಾಗಿದ್ದರು. ಸಹಜವಾಗಿಯೇ, ಹಿಂದೂ ಧರ್ಮದ ಪರಿಕಲ್ಪನೆಗಳೆಲ್ಲ ಅವರಿಗೆ ಕಾಲ್ಪನಿಕವಾಗಿ ಗೋಚರಿಸಿದವು. ಅದನ್ನೇ ಇಲ್ಲಿನ ಜನರ ತಲೆಗೂ ತುಂಬುತ್ತಾ ಬಂದರು. ಹಿಂದೂ ಧರ್ಮದ ತುಂಬೆಲ್ಲಾ ಸುಳ್ಳಿನ ಸರಮಾಲೆಗಳೇ ಹುದುಗಿವೆ ಎಂಬುದನ್ನು ಶಿಕ್ಷಣದಿಂದ ಹೇಳಿದರು. ಬರೀ ನಮ್ಮವರಿಗಲ್ಲ, ಇಡೀ ಜಗತ್ತಿನಾದ್ಯಂತ ಇದನ್ನೇ ಬಿತ್ತಿದರು. ಯಾವ ಭಾರತದ ಸಂಸ್ಕೃತಿಯೇ ವಿಶ್ವದೆಲ್ಲೆಡೆ ಕಾಣಸಿಗುತ್ತದೆಯೋ, ಅದನ್ನು ಗೇಲಿ ಮಾಡಿದರು. ಆಗ ತಾನೇ ಆಧುನಿಕ ವಿಜ್ಞಾನದೆಡೆಗೆ ವಾಲುತ್ತಿದ್ದ ನಮ್ಮ ಯುವಕರೂ ಅವರನ್ನೇ ಹಿಂಬಾಲಿಸಿದರು..! ರಾಜಕೀಯವಾಗಿ ಗುಲಾಮಗಿರಿಯಲ್ಲಿರುವ ದೇಶದ ಜನ, ಮಾನಸಿಕವಾಗಿಯೂ ನಾವು ಅಜ್ಞಾನಿಗಳು ಎಂಬ ಭಾವ ತಾಳಿಬಿಟ್ಟರೆ, ದೇಶದ ಗತಿ ಏನಾಗಬೇಡ.!!

ಆ ಸಮಯದಲ್ಲಿ ಅತ್ಯಗತ್ಯ ಇದ್ದಿದ್ದು, ಈ ಮಾನಸಿಕ ರೋಗವನ್ನು ಪರಿಹರಿಸುವ ಔಷಧ. ಭಾರತ ಮೌಢ್ಯಗಳ ದೇಶವಲ್ಲ. ಆರ್ಯಭಟ-ಭಾಸ್ಕರನಂತಹ ಜ್ಞಾನಿಗಳನ್ನು ಋಷಿರತ್ನಗಳನ್ನು ನೀಡಿದ ದೇಶವಿದು. ಹಿಂದೂ ಧರ್ಮ ಅಜ್ಞಾನಿಗಳ ಸಿದ್ಧಾಂತವಲ್ಲ. ಅದೊಂದು ಬದುಕಿನ ಕಲೆ. ಇಡೀ ರಾಷ್ಟ್ರವನ್ನು ಒಂದೇ ಸೂತ್ರದಲ್ಲಿ ಬೆಸೆಯುವ ಮನೋಭಾವವೇ ಹಿಂದುತ್ವ. ಸಮಸ್ತ ಸೃಷ್ಟಿಯನ್ನೂ ಪ್ರೀತಿಸುವ ಧರ್ಮ ಭಾರತದ್ದು

ಪುಟ 10 ಕ್ಕೆ ➤

➤ ಪುಟ 9 ರಿಂದ..... ವಿವೇಕಾನಂದ

ಎಂಬುದನ್ನು ಯುವಕರ ಮನಸ್ಸಿನಲ್ಲಿ ಬೇರೂರಿಸುವ ವ್ಯಕ್ತಿಯೊಬ್ಬನ ಅವಶ್ಯಕತೆ ತೀವ್ರವಾಗಿತ್ತು. ರಾಮಕೃಷ್ಣ ಪರಮಹಂಸರ ಬಳಿ ಹೋಗಿ, ನೀವು ದೇವರನ್ನು ನೋಡಿದ್ದೀರಾ ? ಎಂದು ಕೇಳಿದ ಆ ಬಾಲಕ ವಿವೇಕಾನಂದ ಆಗದೆ ಇದ್ದಿದ್ದರೆ, ನಮ್ಮಲ್ಲಿದ್ದ ಆ ರೋಗ ಉಲ್ಬಣವಾಗಿ, ದೇಶವೇ ಮುಳುಗಿ ಹೋಗುತ್ತಿತ್ತೇನೋ.!! ಆಚರಣೆ–ಕಟ್ಟುಪಾಡುಗಳ ಮಧ್ಯದಲ್ಲೇ ಸುತ್ತುತ್ತಿದ್ದ ಹಿಂದೂ ಧರ್ಮಕ್ಕೆ ಆಧುನಿಕ ಸ್ಪರ್ಶ ನೀಡಿದವರಲ್ಲಿ ವಿವೇಕಾನಂದರೆ ಅಗ್ರಗಣ್ಯರು. ಇಡೀ ದೇಶ ಸುತ್ತಿ ಅವರು ಪ್ರಚಾರ ಮಾಡಿದ್ದು ಇದನ್ನೇ. ಜಗತ್ತಿನಾದ್ಯಂತ ಪ್ರವಚನ ಮಾಡಿದ್ದೂ ಹಿಂದೂ ಧರ್ಮದ ಗರಿಮೆಯನ್ನೆ.!

ವಿವೇಕಾನಂದ ಅಂದ ತಕ್ಷಣ, ಕಾವಿ ಧರಿಸಿದ ಸನ್ಯಾಸಿಯ ಚಿತ್ರವೇ ಕಣ್ಣಿಗೆ ಕಟ್ಟುತ್ತದೆ. ಹಾಗಂತ ಅವರೇನೂ ಬರಿಯ ಸನ್ಯಾಸಿಗಳಲ್ಲ. ಅವರೊಬ್ಬ ಕ್ಷಾತ್ರ–ಸನ್ಯಾಸಿ. ವಿವೇಕಾನಂದರೆಂದರೆ ಅಮೆರಿಕಾದಲ್ಲಿ ಮಾಡಿದ ಭಾಷಣ, ಧರ್ಮ–ಸುಧಾರಣೆಗಳಷ್ಟೇ ಅಲ್ಲ. ಸ್ವಾತಂತ್ರ್ಯ ಸಂಗ್ರಾಮದ ಅದ್ಭುತ ಪ್ರೇರಕರೂ ಅವರಾಗಿದ್ದರು. 'ಬಾಘಾ' ಅಂತಲೇ ಹೆಸರಾದ ಜತೀಂದ್ರನಾಥ್ ಮುಖರ್ಜೀ, ಸುಭಾಷಚಂದ್ರ ಬೋಸ್, ಅರವಿಂದ ಘೋಷ್ ಅಂತಹ ಮಹಾಮಹಾ ಹೋರಾಟಗಾರರಿಗೆ ಮೂಲ ಸ್ಫೂರ್ತಿಯೇ ವಿವೇಕಾನಂದರು. ಸ್ವತಃ ವಿವೇಕಾನಂದರ ತಮ್ಮ ಭೂಪೇಂದ್ರನಾಥ ದತ್ತ, ಬಂಗಾಳ ಅನುಶೀಲನ ಸಮಿತಿಯ ಸದಸ್ಯನಾಗಿದ್ದ..

ರೊಸೊವಿನ ಪ್ರಭಾವ ಫ್ರೆಂಚ್ ಕ್ರಾಂತಿಯಲ್ಲಾದಂತೆ, ಮಾರ್ಕ್ಸ್‌ನ ಪ್ರಭಾವ ಚೀನಾ ಕ್ರಾಂತಿಯಲ್ಲಾದಂತೆ, ಸ್ವಾಮೀ ವಿವೇಕಾನಂದರ ಪ್ರಭಾವವೂ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿದೆ. ಆಗಿನ್ನೂ ಭಾರತದ ಕ್ರಾಂತಿಕಾರಿಗಳಿಗೆ ಬಾಂಬ್‌ಗಳ ಪರಿಚಯವಿರಲಿಲ್ಲ. ಸಶಸ್ತ್ರಕ್ರಾಂತಿಯಲ್ಲಿ ಬಾಂಬ್‌ಗಳ ಅವಶ್ಯಕತೆಯನ್ನು ತಿಳಿಸಿದವರಲ್ಲಿ ವಿವೇಕಾನಂದರೆ ಮೊದಲಿಗರು. ಅಷ್ಟೇ ಅಲ್ಲದೆ ಯುರೋಪ್ ರಾಷ್ಟ್ರಗಳ ಸಹಾಯದಿಂದ ಬಾಂಬ್ ತಯಾರಿಕೆಯ ಅಂಶಗಳನ್ನು ಅವರೇ ತಲುಪಿಸಿದ್ದು. ಹೀಗಾಗಿ ಆಗಿನ ಕ್ರಾಂತಿಕಾರಿಗಳಿಗೆ ವಿವೇಕಾನಂದರ ಸಾಹಿತ್ಯವೇ ಪಠ್ಯಪುಸ್ತಕವಿದ್ದಂತೆ. ರಾಮಕೃಷ್ಣ ಮಿಷನ್ನಿನ ಅನೇಕ ಸನ್ಯಾಸಿಗಳೂ ಈ ರಾಷ್ಟ್ರ ಹೋರಾಟದಲ್ಲಿ ಭಾಗವಹಿಸಿದ್ದರು. ಹೀಗಾಗಿಯೇ ಅನೇಕ ಬಾರಿ ಮಿಶನ್ನನ್ನು ನಿಷೇಧಿಸುವ ಆಲೋಚನೆಯನ್ನೂ ಬ್ರಿಟಿಶ್ ಸರ್ಕಾರ ಮಾಡಿತ್ತು. ಇವೆಲ್ಲದರ ನಡುವೆಯೂ ಹೇಮಚಂದ್ರದಾಸ್ ಕನುಂಗೊ, ಖುದೀರಾಮರಂತಹ ದೇಶಭಕ್ತರ ಉದ್ಭವವಾಗಿದ್ದು ಆ ಕ್ರಾಂತಿಸನ್ಯಾಸಿಯ ಪ್ರೇರಣೆಯಿಂದಲೇ..!

ಕೇವಲ ಕ್ರಾಂತಿಕಾರಿಗಳಿಗಷ್ಟೇ ಅಲ್ಲ, ಎಲ್ಲ ಸ್ವಾತಂತ್ರ್ಯ ಪ್ರೇಮಿಗಳಿಗೂ ಅವರು ಪ್ರೇರಕರಾಗಿದ್ದರು. ಸುರೇಂದ್ರನಾಥ್ ಬ್ಯಾನರ್ಜೀ, ಮಂದಗಾಮಿಗಳಾದ ಗೋಪಾಲಕೃಷ್ಣ ಗೋಖಲೆ ಯಂತಹ ಹಿರಿಯರೂ ಸ್ವಾಮೀಜಿಯನ್ನು ಗೌರವಾದರಗಳಿಂದ ಕಾಣುತ್ತಿದ್ದರು. ಗಾಂಧೀಜಿಯವರೂ ಕೂಡ "ವಿವೇಕಾನಂದರನ್ನು ಓದಿದ ನಂತರ, ನನ್ನ ದೇಶದ ಮೇಲಿದ್ದ ಪ್ರೀತಿ ಜಾಸ್ತಿಯಾಗಿದೆ" ಎಂದಿರುವಾಗ ಆ ತೇಜಃಪುರುಷನ ಪ್ರಭಾವ ಸ್ಫುಟವಾದೀತು. ಅಕಸ್ಮಾತ್ ಆ ಸನ್ಯಾಸಿಯ ಉದಯ ಆಗಿರದಿದ್ದರೆ, ಇಂತಹ ಅಪ್ರತಿಮ ದೇಶಭಕ್ತರ ಯಶೋಗಾಥೆಗಳು ಹುಟ್ಟುತ್ತಲೇ ಇರಲಿಲ್ಲ..!

ಧರ್ಮ ಮತ್ತು ವಿಜ್ಞಾನ ಎರಡೂ ರಥದ ಚಕ್ರಗಳಿದ್ದಂತೆ. ಹೀಗಾಗಿ, ಆಧ್ಯಾತ್ಮ ದೇಶಕ್ಕೆ ಎಷ್ಟು ಅಗತ್ಯವಿದೆಯೋ, ಅಷ್ಟೇ ವೈಜ್ಞಾನಿಕತೆಗೂ ಇದೆ. ಅದನ್ನು ಮನಗಂಡು, ರಾಷ್ಟ್ರವು ವಿಜ್ಞಾನದ ಪಥದಲ್ಲಿ ಮುಂದುವರೆಯಬೇಕೆಂಬ ಮಹದಾಸೆ ಮತ್ತು ದೂರದೃಷ್ಟಿ ಹೊಂದಿದ್ದೂ ವಿವೇಕಾನಂದರೇ.

1893 ರಲ್ಲಿ ಒಮ್ಮೆ ಅಚಾನಕ್ಕಾಗಿ ಜೆಮ್ ಶೆಡ್ಜಿ ಟಾಟಾ ಅವರು ವಿವೇಕಾನಂದರನ್ನು ಅನಿರೀಕ್ಷಿತವಾಗಿ ಭೇಟಿಯಾಗಿದ್ದರು. ಆಗ, ವಿವೇಕಾನಂದರೆದುರು ಭಾರತಕ್ಕೆ ತಾವು ಪರಿಚಯಿಸುತ್ತಿರುವ ಸ್ಟೀಲ್ ಉದ್ಯಮದ ಬಗ್ಗೆ ವಿವರಿಸಿದ್ದರು. ಅದಾದ ಮೇಲೆ ಟಾಟಾ ರವರು, ತಮ್ಮ ಮುಂದಿನ ವಿಜ್ಞಾನದ ಕೆಲಸಗಳಿಗೆ ಸಲಹೆಗಳನ್ನು ಕೊಡಬೇಕಾಗಿ ವಿನಂತಿಸಿಕೊಂಡಾಗ, ವಿವೇಕಾನಂದರು ವಿಜ್ಞಾನದ ಕಲಿಕೆಗೆ ಅನುಕೂಲವಾಗುವಂತಹ ಒಂದು ಶೈಕ್ಷಣಿಕ ಸಂಸ್ಥೆಯನ್ನು ತೆರೆಯಲು ಸೂಚಿಸಿದರು. ಅಲ್ಲದೆ ಅದಕ್ಕಾಗಿ ಬೆಂಗಳೂರಿನಂತಹ ಉತ್ತಮ ಪ್ರದೇಶದ ಆಯ್ಕೆಯನ್ನೂ ಹೇಳಿದ್ದರು. ಆನಂತರ ಮೈಸೂರು ರಾಜರ ಜೊತೆ ಮಾತುಕತೆ ನಡೆಸಿ "ಟಾಟಾ ಇನ್ಸ್ಟಿಟ್ಯೂಟ್" ಅನ್ನು ತೆರೆಯಲಾಯಿತು. ಇದೇ ಇಂದು "ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್" ಎಂಬ ಹೆಸರಿನಿಂದ ವಿಶ್ವಪ್ರಸಿದ್ಧವಾಗಿದೆ. ದೇಶದಲ್ಲಿರುವ ಎಲ್ಲ ವಿಜ್ಞಾನದ ಸಂಸ್ಥೆಗಳಲ್ಲಿ ಇದೇ ಮುಂಚೂಣಿಯಲ್ಲಿರುವ ಸಂಸ್ಥೆ. ಅನೇಕ ಆವಿಷ್ಕಾರಗಳನ್ನು ಈ ಸಂಸ್ಥೆ ಹೊರತಂದಿದೆ. ಅಕಸ್ಮಾತ್ ವಿವೇಕಾನಂದರು ಅಂದು ಇಂತಹ ಕಲ್ಪನೆಯನ್ನು ಟಾಟಾರವರಿಗೆ ಕೊಡದೆ ಇದ್ದಿದ್ದರೆ, ಬಹುಶಃ ಮೊದಲೇ ವೈಜ್ಞಾನಿಕವಾಗಿ ನಿಧಾನಗತಿಯಲ್ಲಿರುವ ಭಾರತ ಇನ್ನೂ ಹಿಂದುಳಿಯುತ್ತಿತ್ತೇನೋ.!!

ಪುಟ 17 ಕ್ಕೆ ➤

# ಪೂಜನೀಯ ವಿದ್ವಾನ್ ಎನ್. ರಂಗನಾಥ ಶರ್ಮರವರು



**20 ವರ್ಷಗಳ ಹಿಂದೆ ಆಗಿನ ವಿದ್ಯಾಭ್ಯಾಸದ ಪದ್ಧತಿ ವ್ಯವಸ್ಥೆ, ಮತ್ತು ಪಾಠಕ್ರಮಗಳನ್ನು ಕುರಿತು ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಶೆಯಿಂದ ಒಬ್ಬ ಮಹಾತ್ಮರು ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರ ಇಂದಿಗೂ ಪ್ರಸ್ತುತ. 'ಇಂದಿನ ವಿದ್ಯಾಭ್ಯಾಸ ಕ್ರಮವು ಬಾಲಕರ ಮತ್ತು ಯುವಕರ ಜ್ಞಾನಭಿವೃದ್ಧಿ ಶೀಲನಿರ್ಮಾಣ, ಮಹಿಮಾಯುತ ವ್ಯಕ್ತಿತ್ವವನ್ನು ಯೋಗ್ಯವಾಗಿ ಬೆಳಸಲು ಸಾಧಕ ಆಗಿದೆಯೇ?. ಸಂಸ್ಕೃತ ಶಾಲೆಗಳಲ್ಲಾಗಲಿ ಇತರ ಸಾರ್ವಜನಿಕ ವಿದ್ಯಾಸಂಸ್ಥೆಗಳಲ್ಲಾಗಲಿ ನಡೆಯುವ ವಿದ್ಯಾಭ್ಯಾಸ ಕ್ರಮಗಳಲ್ಲಿ ಶೀಲ ನಿರ್ಮಾಣದ ಪ್ರಶ್ನೆಯೇ ಇಲ್ಲ. ನೀತಿ ಬೋಧನೆಗೆ ಅವಕಾಶವನ್ನೇ ಕಲ್ಪಿಸಿಲ್ಲ. ಮಹಿಮಾನ್ವಿತ ವ್ಯಕ್ತಿಯಾಗಿ ಬೆಳೆಯುವ ಚಿಂತನೆ ಮಾತ್ರವೇ ತಿಳಿದಿದೆ. ಆಯಾ ವಿಷಯಗಳಲ್ಲಿ ಸ್ವಲ್ಪ ಜ್ಞಾನಾಭಿವೃದ್ಧಿಗೆ ಮಾತ್ರ ಅವಕಾಶವಿದೆ.**

**ಆಚಿನೋತಿ ಹಿ ಶಾಸ್ತ್ರಾರ್ಥಂ ಆಚಾರೇ ಸ್ಥಾಪಯತ್ಯಪಿ। ಸ್ವಯಮಾಚರತೇ ಯಸ್ಮಾತ್ ತಸ್ಮಾದಾಚಾರ್ಯ ಉಚ್ಯತೇ॥**

ಶಾಸ್ತ್ರಾರ್ಥಗಳನ್ನು ಅರ್ಥೈಯಿಸಿಕೊಂಡು, ಅದನ್ನು ಯಥಾವತ್ತಾಗಿ ವಿವರಿಸಿ, ತಾನು ಸ್ವತಃ ಶಾಸ್ತ್ರಕ್ಕನುಗುಣವಾಗಿ ನಡೆದುಕೊಂಡು, ಜನರಿಗೆ ಶಾಸ್ತ್ರೋಕ್ತ ರೀತಿಯಲ್ಲಿ ಮಾರ್ಗದರ್ಶನ ಮಾಡುವ ಮಾರ್ಗದರ್ಶಿಯಾಗಿರುವವನನ್ನು 'ಆಚಾರ್ಯ' ಎಂದು ಹೇಳುತ್ತಾರೆ. ಇಷ್ಟೊಂದು ವಿಶಿಷ್ಟಾರ್ಥ ಪರಿಪೂರ್ಣವಾದ ಆಚಾರ್ಯ ಪದ ಪ್ರಯೋಗಕ್ಕೆ ಯೋಗ್ಯವಾದ ವ್ಯಕ್ತಿ ಯಾರೆಂಬ ಪ್ರಶ್ನೆ ಉದ್ಭವಿಸಿದಾಗ ತಕ್ಷಣ ಮನಸ್ಸಿಗೆ ಬರುವವರು ಪೂಜನೀಯ ವಿದ್ವಾನ್ ಎನ್. ರಂಗನಾಥ ಶರ್ಮರವರು.

ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾ ವಿದ್ಯಾಲಯದಲ್ಲಿ ವ್ಯಾಕರಣ ಶಾಸ್ತ್ರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಶ್ರೀಯುತ ಶರ್ಮರವರು ನೂರಾರು ಯೋಗ್ಯ ಶೀಲಸ್ಯರಿಗೆ ವ್ಯಾಕರಣ ಶಾಸ್ತ್ರವನ್ನು ನಿಷ್ಠೆಯಿಂದ ವಾತ್ಸಲ್ಯ ಪೂರ್ಣವಾಗಿ ಬೋಧಿಸಿ ಛಾತ್ರ ಸಮೂಹದ ಪ್ರೀತಿಗೆ ಪಾತ್ರರಾದ ಶ್ರೇಷ್ಠ ವಿದ್ವಾಂಸರು. ಇವರು ಕೇವಲ ಶಿಕ್ಷಕರೋ, ಉಪನ್ಯಾಸಕರೋ, ಪ್ರಾಚಾರ್ಯರೋ ಆಗಿರದೆ ಉತ್ತಮ 'ಬೋಧಕರು' ಎಂಬುದೇ ಅವರ ಬೋಧನಾ ವೈಖರಿಗೆ ಅರ್ಥವತ್ತಾದ ಪದ. "ಬೋಧಯತೀ ಇತಿ ಬೋಧಕಃ" ಬುಧ(ಅವಗಮನೇ) ಧಾತುವಿಗೆ – ಜಂತದಲ್ಲಿ ಕ್ವಾಲ್ ಪ್ರತ್ಯಯ ಮಾಡಿದಾಗ 'ಬೋಧಕ' ಶಬ್ಧ ಎಂದಾಗುತ್ತದೆ. ಜ್ಞಾನವನ್ನುಂಟು ಮಾಡುವವನು, ತಿಳಿಯಪಡಿಸುವವನು, ಉಪದೇಶಿಸುವವನು, ಶೃತಪಡಿಸುವವನು ಎಂಬುವುದು ಇದರ ಅರ್ಥ. ಶ್ರೀಯುತ ಶರ್ಮರು ತಾನು ತಿಳಿದ ಶಾಸ್ತ್ರಾರ್ಥವನ್ನು ಶಿಷ್ಯರಿಗೆ ಅರ್ಥವಾಗುವ ರೀತಿಯಲ್ಲಿ ಶಾಸ್ತ್ರಾರ್ಥವು 'ಜ್ಞಾನವು' ನೆಲೆ ನಿಲ್ಲುವಂತೆ ಮಾಡುವ ಅಸದೃಶವಾದ ಬೋಧನಾ ಸಾಮರ್ಥ್ಯ ಉಳ್ಳವರು. ಅಲಂಕಾರ– ವ್ಯಾಕರಣ– ವೇದಾಂತ ಶಾಸ್ತ್ರಗಳಲ್ಲಿ ಮತ್ತು ಸಾಂಖ್ಯ–ಜೈನಸಿದ್ಧಾಂತಗಳಲ್ಲಿ ಅಗಾಧ ಪಾಂಡಿತ್ಯ ಉಳ್ಳ ಬಹುಶೃತ ವಿದ್ವಾಂಸರು. ಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟ ಪ್ರಮೇಯ, ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಿ ಅದರ ಬಗ್ಗೆ ಸಾಕಷ್ಟು ಮಜಲುಗಳಲ್ಲಿ ಚಿಂತನ– ಮಂಥನ ಮಾಡಿ 'ಇದಮಿಥ್ಥಮ್' ಎಂದು ಹೇಳುವ ಧೀ ಶಕ್ತಿಯ ಜೊತೆಗೆ ಅದೇ ವಿಷಯವನ್ನು ಸರಳವಾದ ಕ್ರಮದಲ್ಲಿ ಸಾಮಾನ್ಯರಿಗೂ ತಿಳಿಸಿಹೇಳುವ ಕೌಶಲ ಅವರಲ್ಲಿತ್ತು.

ಶ್ರೀ ಶರ್ಮರು ಬಹುಭಾಷಾತಜ್ಞರು. ಸಂಸ್ಕೃತ ಸಾಹಿತ್ಯವನ್ನು ಅಧ್ಯಯನ ಮಾಡಿ, ಗೀರ್ವಾಣ ವಾಣಿಯ ಸೇವೆಯನ್ನು ಎಷ್ಟು ಶ್ರದ್ಧಾ ಭಕ್ತಿಯಿಂದ ಮಾಡಿದರೋ ಅದೇ ರೀತಿಯಲ್ಲಿ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಿ ಕನ್ನಡ ಭಾಷೆಗೆ ತಮ್ಮ ಅಪಾರ ಕೊಡುಗೆಯಿಂದ ಅದನ್ನೂ ಶ್ರೀಮಂತ ಗೊಳಿಸಿದ್ದವರು. ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಹಳೆಗನ್ನಡದ ಕಾವ್ಯಗಳನ್ನು ಅನುವಾದ ಮಾಡುವ ಕಾರ್ಯದಲ್ಲಿ ಇವರ ಸೇವೆ ಚಿರಸ್ಮರಣೀಯ. ಇಂಗ್ಲೀಷ್ ದಿನಪತ್ರಿಕೆಯನ್ನು ಓದುವ ಹವ್ಯಾಸವಿದ್ದ ಶರ್ಮರವರು ಇಂಗ್ಲೀಷ್ ಭಾಷೆಯಲ್ಲಿ ವಿಮರ್ಶಾತ್ಮಕ ಲೇಖನಗಳನ್ನು ಬರೆಯುವಷ್ಟರ ಮಟ್ಟಿಗೆ ಸಾಮರ್ಥ್ಯವುಳ್ಳವರಾಗಿದ್ದರು. ಕನ್ನಡ ಅವರ ಮಾತೃ ಭಾಷೆಯಾದರೆ, ಸಂಸ್ಕೃತ ಅವರ ಜೀವನದ ಭಾಷೆಯಾಗಿತ್ತು. ಭಾಷೆಯ ಉಗಮ– ಬೆಳವಣಿಗೆ– ಲಿಪಿಯ ವೈಶಿಷ್ಟ್ಯ ಮೊದಲಾದ ಭಾಷಾಶಾಸ್ತ್ರಕ್ಕೆ ಸಂಬಂಧಪಟ್ಟ ಅಂಶಗಳನ್ನು ಜಾಗತಿಕ ಸ್ತರದಲ್ಲಿ ತುಲನಾತ್ಮಕ ಅಧ್ಯಯನ ಮಾಡಿ ಎಷ್ಟೋ ಮುಖ್ಯವಾದ ವಿಷಯಗಳನ್ನು ನಿರ್ಭೀತಿಯಿಂದ ಪ್ರತಿಪಾದಿಸಿದ್ದಾರೆ.

ಅಜಾತ ಶತ್ರುವಾದ ಶ್ರೀಯುತ ಶರ್ಮಾರವರು ಎಲ್ಲರನ್ನೂ ಸಮಾನವಾಗಿ ಕಾಣುವ ಉದಾರ ಹೃದಯಿಗಳು. ಅವರ ಸಂಕರ್ಪ ಪಡೆದ ಪ್ರತಿಯೊಬ್ಬರು ಅವರ ವಾತ್ಸಲ್ಯಪೂರ್ಣವಾದ

ಪುಟ 12 ಕ್ಕೆ ➢

➢ ಪುಟ 11 ರಿಂದ..... ರಂಗನಾಥ ಶರ್ಮರು

ಮಾತು – ಕಥೆ ನಡೆ –ನುಡಿ, ಆತಿಥ್ಯಗಳನ್ನು ಸವಿದಿದ್ದಾರೆ. 'ವಸುದೈವ ಕುಟುಂಬಕಂ' ಎಂಬ ವಾಙ್ಮೋಕ್ತಿಯಂತೆ ನಡೆದು ತೋರಿಸಿದವರು. ಶಂಕರ ಭಗವತ್ಪಾದರು ಪ್ರತಿಪಾದಿಸಿರುವ ಏಕಾತ್ಮತಾ ವಾದವನ್ನು ಸರಿಯಾಗಿ ಅರ್ಥೈಯಿಸಿಕೊಂಡು ಆಚರಣೆಗೆ ತಂದವರಲ್ಲಿ ಅಗ್ರಮಾನ್ಯರು. ಅವರ ನಿಷ್ಕಪಟ ನಡೆ –ನುಡಿ ಆತ್ಮೀಯ ಸ್ಪಂದನ, ಸರಳ ಸಜ್ಜನಿಕೆ, ವಿನಯಪೂರ್ಣ ವೈದುಶ್ಯ, ಉದಾರ– ಆಹ್ಲಾದಕರವಾದ ಮಾತುಕತೆ ಮೊದಲಾದ ಗುಣ ಸಮುಚ್ಚಯಗಳಿಂದ ಜನಾನುರಾಗಕ್ಕೆ ಪಾತ್ರರಾಗಿ 'ವಿದ್ಯಾವಿನಯೇನ ಶೋಭತೆ' ಎಂಬ ಮಾತಿಗೆ ಅರ್ಥಕೊಟ್ಟವರು ನಮ್ಮ ಶರ್ಮರವರು.

ವಿದ್ವಾನ್ ಶರ್ಮರು ಉತ್ತಮ ಚಿಂತಕರು, ಸಾಮಾಜಿಕ ಸಮಸ್ಯೆಗಳ ಬಗ್ಗೆ ಕಳಿಕಳಿ ಉಳ್ಳವರು. ವೈಯುಕ್ತಿಕವಾಗಿ ಎಷ್ಟೇ ಕಷ್ಟ–ಕಾರ್ಪಣ್ಯಗಳಿದ್ದರೂ ಸಮಾಜಮುಖಿಯಾಗಿ ಯೋಚಿಸುವ ಸಾಮಾಜಿಕ ಪ್ರಜ್ಞೆಯುಳ್ಳ ಉತ್ತಮ ಪ್ರಜೆಯೂ ಆಗಿದ್ದರು.

ತತ್ವಜ್ಞಾನಿಗಳಾದ ಇವರು ಉತ್ತಮ ಲೇಖಕರು. ಇವರು ಬರೆದ ಗ್ರಂಥಗಳನ್ನು, ಲೇಖನಗಳನ್ನು, ಅನುವಾದ ಕೃತಿಗಳನ್ನು, ಬಿಡಿ ಲೇಖನಗಳನ್ನು ಓದುವುದೇ ಒಂದು ಪರಮಾನಂದ. ಅವರ ಬರವಣಿಗೆಯ ಶೈಲಿ. ಓದುಗರ ಮನಸ್ಸನ್ನು ಒಂದೆಡೆ ಹಿಡಿದಿಟ್ಟು ತಾನಾಗಿಯೇ ಓದಿಸಿಕೊಂಡು ಹೋಗುವಂತಾಹದು. ಶ್ರೀಮದ್ರಾಮಾಯಣದ 24 ಸಹಸ್ರ ಶ್ಲೋಕಗಳ ಸುಂದರವಾದ ಕನ್ನಡಾನುವಾದ, ವಿಷ್ಣುಪುರಾಣ, ಶ್ರೀಮದ್ಭಾಗವತದ 10,11,12ನೇ ಸ್ಕಂದಗಳ ಅನುವಾದ ಅಮರಕೋಶದ ಕನ್ನಡ ಅನುವಾದಗಳು ಅವರ ಅನುವಾದ ಗ್ರಂಥಗಳಲ್ಲಿ ಉತ್ಕೃಷ್ಟವಾದವುಗಳು. ನೂರಾರು ಗ್ರಂಥಗಳಿಗೆ ಮುನ್ನುಡಿ, ಶಾಸ್ತ್ರ ಗ್ರಂಥಗಳ ಅನುವಾದ, ಸ್ವತಂತ್ರವಾಗಿ ರಚಿಸಿದ ಸಂಸ್ಕೃತ ಕನ್ನಡ ಕೃತಿಗಳು ಅವರ ಲೇಖನ ಕೌಶಲ್ಯಕ್ಕೆ, ಅಗಾಧ ಪಾಂಡಿತ್ಯಕ್ಕೆ, ಚಿಂತನಶೀಲ ಮನೋಭಾವಕ್ಕೆ ಕನ್ನಡಿಯಂತಿದೆ.

ಆಯಾಕಾಲಕ್ಕೆ ಎಲ್ಲಾ ಸ್ತರದ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾಭ್ಯಾಸದ ಬಗ್ಗೆಯೂ ಸದಾ ಯೋಚಿಸಿ ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಣೆ ನೀಡುವ ಶರ್ಮರೊಡನೆ 20 ವರ್ಷಗಳ ಹಿಂದೆ ಆಗಿನ ವಿದ್ಯಾಭ್ಯಾಸದ ಪದ್ಧತಿ ವ್ಯವಸ್ಥೆ, ಮತ್ತು ಪಾಠಕ್ರಮಗಳನ್ನು ಕುರಿತು ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಶೆಯಿಂದ ಒಬ್ಬ ಮಹಾತ್ಮರು ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರ ಇಂದಿಗೂ ಪ್ರಸ್ತುತ. 'ಇಂದಿನ ವಿದ್ಯಾಬ್ಯಾಸ ಕ್ರಮವು ಬಾಲಕರ ಮತ್ತು ಯುವಕರ ಜ್ಞಾನಭಿವೃದ್ಧಿ ಶೀಲನಿರ್ಮಾಣ, ಮಹಿಮಾಯುತ ವ್ಯಕ್ತಿತ್ವವನ್ನು ಯೋಗ್ಯವಾಗಿ ಬೆಳಸಲು ಸಾಧಕ ಆಗಿದೆಯೇ?. ಸಂಸ್ಕೃತ ಶಾಲೆಗಳಲ್ಲಾಗಲಿ ಇತರ ಸಾರ್ವಜನಿಕ ವಿದ್ಯಾಸಂಸ್ಥೆಗಳಲ್ಲಾಗಲಿ ನಡೆಯುವ ವಿದ್ಯಾಭ್ಯಾಸ ಕ್ರಮಗಳಲ್ಲಿ ಶೀಲ ನಿರ್ಮಾಣದ ಪ್ರಶ್ನೆಯೇ ಇಲ್ಲ. ನೀತಿ ಬೋಧನೆಗೆ ಅವಕಾಶವನ್ನೇ ಕಲ್ಪಿಸಿಲ್ಲ. ಮಹಿಮಾನ್ವಿತ ವ್ಯಕ್ತಿಯಾಗಿ ಬೆಳೆಯುವ ಚಿಂತನೆ ಮಾತ್ರವೇ ತಿಳಿದಿದೆ. ಆಯಾ ವಿಷಯಗಳಲ್ಲಿ ಸ್ವಲ್ಪ ಜ್ಞಾನಾಭಿವೃದ್ಧಿಗೆ ಮಾತ್ರ ಅವಕಾಶವಿದೆ.

ಕನ್ನಡ, ಸಂಸ್ಕೃತ ಅಥವಾ ಇಂಗ್ಲೀಷ್ ಭಾಷೆಗಳಲ್ಲಿ ಇಂದಿನ ವಿದ್ಯಾಭ್ಯಾಸದ ರೀತಿ ನೀತಿ, ಪದ್ಧತಿ, ವ್ಯವಸ್ಥೆ ಮತ್ತು ಪಾಠ ಕ್ರಮಗಳನ್ನು ಕುರಿತು ನಿಮ್ಮ ಅಭಿಪ್ರಾಯವೇನು? ವೈಜ್ಞಾನಿಕ ವಿಷಯಗಳನ್ನು ಹೊರತುಪಡಿಸಿ ಭಾಷಾಧ್ಯಾಯನದ ವಿಷಯವಾಗಿ ಮಾತ್ರ ಹೇಳಬಲ್ಲೆ. ಕನ್ನಡ, ಇಂಗ್ಲೀಷ್ ಭಾಷೆಗಳ ಅಧ್ಯಯನ ಮತು ಜ್ಞಾನದ ಮಟ್ಟ ತುಂಬಾ ಕುಸಿದುಹೋಗಿದೆ. ವಿದ್ಯಾರ್ಥಿಗಳಿಗೆ ಕಷ್ಟವಾಗಬಾರದು, ಮಾನಸಿಕ ಶ್ರಮ ಆಗದಿರಲಿ, ವಿದ್ಯಾರ್ಥಿಗಳ ತೇರ್ಗಡೆಯ ಸಂಖ್ಯೆಯನ್ನು ಮಾತ್ರ ಹೆಚ್ಚಿಸಬೇಕು ಎಂದಿಷ್ಟೇ ವಿದ್ಯಾ ಇಲಾಖೆಯವರ, ವಿದ್ಯಾಸಂಸ್ಥೆಗಳ ಘನೋದ್ದೇಶವಾಗಿ ಪರಿಣಮಿಸಿದೆ.

ಹೀಗೆ ಶರ್ಮರು ಮೊದಲಿನಿಂದಲೂ ಸಾಮಾಜಿಕ ವಿಷಯಗಳ ಬಗ್ಗೆ ಸ್ಪಷ್ಟ– ನಿಷ್ಪಕ್ಷಪಾತ ನಿಲುವನ್ನು ತಳೆದಿದ್ದರು.

ವಿದ್ವಾನ್ ಶರ್ಮರ ಮೃದುತ್ವಕ್ಕೆ, ಸಜ್ಜನಿಕೆಗೆ ಅಪಾರವಾದ ಸಾಹಿತ್ಯ ಲೌಕಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ಹಾಗೂ ಕೊಡುಗೆಗೆ ಆರಿಸಿ ಬಂದ ಪ್ರಶಸ್ತಿಗಳು ಅಸಂಖ್ಯಾತ. ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿಗಳು ಇವರಿಗೆ ಸಂದಿರುವುದು ರಾಷ್ಟ್ರ ಹಾಗೂ ರಾಜ್ಯದ ಘನತೆಯನ್ನು ಹೆಚ್ಚಿಸಿದೆ. 'ವಿದ್ಯಾವಾರಿಧಿ', 'ವ್ಯಾಕರಣ ಶಾಸ್ತ್ರಪ್ರವೀಣ', 'ಮಹೋಪಾಧ್ಯಾಯ' ಎಂಬುವೇ ಮೊದಲಾದ ಬಿರುದುಗಳು ಅವರಿಗೆ ಸಲ್ಲಬೇಕಾದೆಂಬುದನ್ನು ಶೃತಪಡಿಸಿದೆ.

1915 ರ ಶಂಕರ ಜಯಂತಿಯ ದಿನ ಶಿವಮೊಗ್ಗ ಜಿಲ್ಲೆಯ ಸೊರಬಾ ತಾಲೂಕಿನ ನಡಹಳ್ಳಿಯಲ್ಲಿ ಸುಸಂಸ್ಕೃತ ಹವ್ಯಕ ಮನೆತನದಲ್ಲಿ ಜನಿಸಿದ ಶರ್ಮರು 25.1.2014 ರಂದು ಮೈಸೂರಿನಲ್ಲಿ ದೈವಾಧೀನರಾದರು. ಇಂದು ಅವರ ಕ್ಷರಶರೀರವು ನಮ್ಮೆದುರಿಗಿಲ್ಲದಿದ್ದರೂ ಅಕ್ಷರ ಶರೀರವೂ ಎಲ್ಲರ ಮನೆ– ಮನಸ್ಸಿನಲ್ಲಿ ರಾರಾಜಿಸುತ್ತಿದೆ. ಶ್ರೀಯುತರ ಮರಣದಿಂದ ದೇಶಕ್ಕೆ ರಾಜ್ಯಕ್ಕೆ ಸಾರಸ್ವತ ಲೋಕಕ್ಕೆ ಬಹಳ ನಷ್ಟವದದ್ದು ಒಂದೆಡೆಯಾದರೆ, ನನಗೆ, ಅವರ ಪ್ರೀತಿಯ ಪ್ರಾಶಿಶ್ಯನಾದವನಿಗೆ ವೈಯಕ್ತಿಯವಾಗಿ ನನ್ನ ಪಿತಾಮಹನನ್ನೇ ಕಳೆದುಕೊಂಡಂತೆ, ನನ್ನ ಜೀವನದ ಬೆನ್ನೆಲುಬು ಮುರಿದಂತೇ ಆಗಿದೆ. ಅವರೊಡನೆ 25 ವರ್ಷಗಳ ಒಡನಾಟವೇ ನನ್ನ ಈ ಅಲ್ಪ ಸ್ವಲ್ಪ ಬೆಳವಣಿಗೆಗೆ ಮೂಲ ಕಾರಣವಾಗಿದೆ. ಅವರ ಜೀವನ ಪದ್ಧತಿಯೇ ಒಂದು ಪಾಠ, ಮಾತುಗಳೇ ಉಪದೇಶ, ಆತ್ಮೀಯ ಶಿಷ್ಯ ವಾತ್ಸಲ್ಯವೇ ಶ್ರೀ ರಕ್ಷೆ. ' ಶತಾಯುಷಿ ಮಾನುಷಃ' ಎಂಬ ಪ್ರಾಜ್ಞರ ನುಡಿಗೆ ನೂರು ವರ್ಷ ಸಾರ್ಥಕವಾಗಿ ಬದುಕಿದ ಶರ್ಮರು ಸಾಕ್ಷಿಯಾದರು.

'ಆಚಾರ್ಯದೇವೋ ಭವ, ನಮೋಗುರುಭ್ಯಃ'

✍ ಶ್ರೀಧರ ಹೆಗ್ಡೆ

ಸದನದಲ್ಲಿ ಪ್ರಶ್ನೋತ್ತರ

# ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಶಿಕ್ಷಕ ಸಂಘದ ಶಾಸಕರಾದ ಶ್ರೀ ಅರುಣ್ ಶಹಾಪುರ್‌ರವರು ಕೇಳಿದ ಪ್ರಶ್ನೆಗಳಿಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಿನಾಂಕ 24-01-2014 ರಂದು ನೀಡಿದ ಉತ್ತರ

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ……</th></tr>
<tr><td>56 ಅ</td><td>2013-14ನೇ ಪ್ರಸ್ತುತ ವರ್ಷದಲ್ಲಿ ಇಲ್ಲಿಯವರೆಗೆ 1987 ರಿಂದ 1995ರವರೆಗೆ ಆರಂಭವಾದ ಎಷ್ಟು ಶಾಲಾ ಕಾಲೇಜುಗಳಿಗೆ ಅನುದಾನ ಒದಗಿಸುವ ಕಡತಗಳಿಗೆ ಅನುಮೋದನೆ ನೀಡಲಾಗಿದೆ;</td><td>ಸಹಾಯಾನುದಾನಕ್ಕೆ ಒಳಪಡಿಸಿರುವ ಶಾಲಾ ಕಾಲೇಜುಗಳ ವಿವರ ಈ ಕೆಳಕಂಡಂತಿದೆ :-
<table>
<tr><td>ಪ್ರಾಥಮಿಕ ಶಾಲೆಗಳು</td><td>724</td></tr>
<tr><td>ಪ್ರೌಢ ಶಾಲೆಗಳು</td><td>766.</td></tr>
<tr><td>ಪದವಿಪೂರ್ವ ಕಾಲೇಜುಗಳು</td><td>247</td></tr>
<tr><td>ಒಟ್ಟು</td><td>1737</td></tr>
</table></td></tr>
<tr><td>ಆ</td><td>ರಾಜ್ಯದಲ್ಲಿ ಎಷ್ಟು ಜನ ಟಿ.ಜಿ.ಟಿ., ಶಿಕ್ಷಕರಿಗೆ ಯಾವ ಯಾವ ವರ್ಷದಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ; ಇವರು ಯಾವ ವೃಂದ ಶ್ರೇಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.</td><td>
<table>
<tr><td>2004-05</td><td>1973</td></tr>
<tr><td>2005-06</td><td rowspan="2">2963</td></tr>
<tr><td>2006-07</td></tr>
<tr><td>2007-08</td><td>609</td></tr>
<tr><td>ಒಟ್ಟು</td><td>5545</td></tr>
</table>
ಗ್ರೂಪ್-ಸಿ, ವೃಂದದ ವೇತನ ಶ್ರೇಣಿ : ರೂ. 17650-32000ರಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.</td></tr>
<tr><td>ಇ</td><td>ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳಲ್ಲಿ ಎಲ್ಲಾ ಟಿ.ಜಿ.ಟಿ ಶಿಕ್ಷಕರು ಪ್ರಸ್ತುತ ನಿರ್ವಹಿಸುತ್ತಿರುವ ಕಾರ್ಯಸ್ಥಾನದ ಪಟ್ಟಿ, ನಿಯೋಜನೆ ಮತ್ತು ಕಾರ್ಯ ನಿರ್ವಹಿಸುತ್ತಿರುವುದನ್ನು ಒಳಗೊಂಡಂತೆ ವಿವರ ನೀಡುವುದು;<br>ಇವರ ವರ್ಗಾವಣೆಗೆ ಇರುವ ನಿಯಮವೇನು?</td><td>
<table>
<tr><td>ಬಿಜಾಪುರ,</td><td>346</td></tr>
<tr><td>ಬಾಗಲಕೋಟೆ</td><td>205</td></tr>
<tr><td>ಚಿಕ್ಕೋಡಿ</td><td>233</td></tr>
<tr><td>ಬೆಳಗಾವಿ,</td><td>181</td></tr>
<tr><td>ಒಟ್ಟು</td><td>965</td></tr>
</table>
ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಮತ್ತು ತಿದ್ದುಪಡಿ ಅಧಿನಿಯಮ-2011.</td></tr>
<tr><td>57 ಅ</td><td>ರಾಜ್ಯದ ಪ್ರಾಥಮಿಕ ಪ್ರೌಢ ಹಾಗೂ ಪದವಿ ಪೂರ್ವ ಉಪನ್ಯಾಸಕರು ತಲಾ ಎಷ್ಟು ಸಂಬಳ ತೆಗೆದುಕೊಳ್ಳುತ್ತಿದ್ದಾರೆ.</td><td>
<table>
<tr><th colspan="3">ಕರ್ನಾಟಕ ರಾಜ್ಯದ ಪ್ರಾಥಮಿಕ/ಪ್ರೌಢ/ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ವೇತನ</th></tr>
<tr><td>ಪ್ರಾಥಮಿಕ ಶಾಲಾ ಶಿಕ್ಷಕರು</td><td>ಪ್ರೌಢ ಶಾಲಾ ಶಿಕ್ಷಕರು</td><td>ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು</td></tr>
<tr><td>19,720/-</td><td>23,245/-</td><td>33,860/-</td></tr>
</table></td></tr>
<tr><td>ಆ</td><td>ಕೇಂದ್ರ ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯದ ತತ್ಸಮಾನ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಉಪನ್ಯಾಸಕರು, ಶಿಕ್ಷಕರು ಪಡೆಯುತ್ತಿರುವ [ಒಟ್ಟು ವೇತನ] ಹೋಲಿಕೆ ಮಾಡಿದಾಗ ರಾಜ್ಯದ ಶಿಕ್ಷಕ, ಉಪನ್ಯಾಸಕರಿಗೆ ಆಗುತ್ತಿರುವ ತಾರತಮ್ಯದ ಅಂಕಿ ಅಂಶಗಳೇನು ? [ಹೋಲಿಕೆ ವಿವರ ಒದಗಿಸುವುದು]</td><td>
<table>
<tr><th></th><th>ಪ್ರಾಥಮಿಕ ಶಾಲಾ ಶಿಕ್ಷಕರು</th><th>ಪ್ರೌಢ ಶಾಲಾ ಶಿಕ್ಷಕರು</th><th>ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು</th></tr>
<tr><td>ಕೇಂದ್ರ</td><td>20,460/-</td><td>25,261/-</td><td>26875/-</td></tr>
<tr><td>ಆಂಧ್ರಪ್ರದೇಶ</td><td>19,332/-</td><td>20,345/-</td><td>35,177/-</td></tr>
<tr><td>ಮಹಾರಾಷ್ಟ್ರ</td><td>19,270/-</td><td>23,388/-</td><td>25660/-</td></tr>
</table></td></tr>
</table>

ಪುಟ 14 ಕ್ಕೆ ➢

➢ ಪುಟ 14 ರಿಂದ.....

## ಪ್ರಶ್ನೋತ್ತರ

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ.......</th></tr>
<tr><td>57 ಆ</td><td></td><td>ಹೋಲಿಕೆ ವಿವರ
<table>
<tr><th></th><th>ಪ್ರಾಥಮಿಕ ಶಾಲಾ ಶಿಕ್ಷಕರು</th><th>ಪ್ರೌಢ ಶಾಲಾ ಶಿಕ್ಷಕರು</th><th>ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು</th></tr>
<tr><td>ಕರ್ನಾಟಕ</td><td>19,720/–</td><td>23,245/–</td><td>33,860/–</td></tr>
<tr><td>ಕೇಂದ್ರ</td><td>20,460/–</td><td>25,261/–</td><td>26875/–</td></tr>
<tr><td>ಆಂಧ್ರಪ್ರದೇಶ</td><td>19,332/–</td><td>20,345/–</td><td>35,177/–</td></tr>
<tr><td>ಮಹಾರಾಷ್ಟ್ರ</td><td>19,270/–</td><td>23,388/–</td><td>25660/–</td></tr>
</table></td></tr>
<tr><td>58 ಅ</td><td>ಶಿಕ್ಷಣ ಇಲಾಖೆಯಡಿಯಲ್ಲಿ ಅನುದಾನಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕಾಲ್ಪನಿಕ ವೇತನ, ಬಡ್ತಿಯ ಸಮಸ್ಯೆ ಪರಿಹಾರಕ್ಕೆ ತಗಲಬಹುದಾದ ವಾರ್ಷಿಕ ವೆಚ್ಚವೆಷ್ಟು;</td><td>ಖಾಸಗಿ ಅನುದಾನಿತ ಪ್ರಾಥಮಿಕ/ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಸಿಬ್ಬಂದಿಗಳ ನೇಮಕಾತಿ ದಿನಾಂಕದಿಂದ ಅನುದಾನಕ್ಕೆ ಒಳಪಟ್ಟ ದಿನಾಂಕದವರೆಗಿನ ಅನುದಾನರಹಿತ ಸೇವೆಯನ್ನು ಪರಿಗಣಿಸಿ, ಎಲ್ಲಾ ಸೌಲಭ್ಯಗಳನ್ನು ನೀಡಿದಲ್ಲಿ ಈ ಕೆಳಕಂಡಂತೆ ಅಂದಾಜು ಆರ್ಥಿಕ ಹೊರೆ ಉಂಟಾಗುತ್ತದೆ.
<table>
<tr><td>ಪ್ರಾಥಮಿಕ ಶಿಕ್ಷಣ</td><td>ರೂ.597.90ಕೋಟಿಗಳು</td></tr>
<tr><td>ಪ್ರೌಢ ಶಿಕ್ಷಣ</td><td>ರೂ.2769.83ಕೋಟಿಗಳು</td></tr>
<tr><td>ಪದವಿ ಪೂರ್ವ ಶಿಕ್ಷಣ</td><td>ರೂ.800.00ಕೋಟಿಗಳು</td></tr>
<tr><td>ಒಟ್ಟು</td><td>ರೂ.4167.73ಕೋಟಿಗಳು</td></tr>
</table>
(ನಾಲ್ಕು ಸಾವಿರದ ಒಂದು ನೂರ ಅರವತ್ತೇಳು ಕೋಟಿ ಎಪ್ಪತ್ತಮೂರು ಲಕ್ಷ ರೂಪಾಯಿಗಳು)</td></tr>
<tr><td>ಆ</td><td>ಎಷ್ಟು ಜನ ಸಿಬ್ಬಂದಿ ಈ ಸಮಸ್ಯೆಯಲ್ಲಿದ್ದಾರೆ;</td><td>ಒಟ್ಟು ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತಿದೆ–
<table>
<tr><td>ಪ್ರಾಥಮಿಕ ಶಿಕ್ಷಣ</td><td>17150</td></tr>
<tr><td>ಪ್ರೌಢ ಶಿಕ್ಷಣ</td><td>38425</td></tr>
<tr><td>ಪದವಿ ಪೂರ್ವ ಶಿಕ್ಷಣ</td><td>6654</td></tr>
<tr><td>ಒಟ್ಟು</td><td>62229</td></tr>
</table></td></tr>
<tr><td>ಇ</td><td>ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರದ ನೀತಿ ನಿಲುವೇನು ಮತ್ತು ಕ್ರಮವೇನು?</td><td>ಅನುದಾನರಹಿತ ಸೇವೆಯನ್ನು ಸೇವಾ ಸೌಲಭ್ಯ/ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಕುರಿತಂತೆ ಸರ್ಕಾರವು ದಾಖಲಿಸಿದ್ದ ಎಸ್.ಎಲ್.ಪಿ.ಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಜಾ ಮಾಡಿರುವ ಹಿನ್ನೆಲೆಯಲ್ಲಿ ಉದ್ಭವವಾಗಿರುವ ಸಮಸ್ಯೆಯ ಕುರಿತಂತೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಮಾಡುವ ಶಿಫಾರಸ್ಸನ್ನಾಧರಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು.</td></tr>
</table>

## ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಕರ್ನಾಟಕ ಶಾಖೆಯ ಆಶ್ರಯದಲ್ಲಿ ದಿನಾಂಕ 8–2–2014 ರ ಶನಿವಾರದಂದು ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ರಾಜ್ಯ ಮಟ್ಟದ ಶಿಕ್ಷಕಿಯರ ವಿಚಾರ ಸಂಕಿರಣ.

ವಿಷಯಗಳು : (1) ನಾಡ ಕಟ್ಟುವಿಕೆಯಲ್ಲಿ ಶಿಕ್ಷಕಿಯರ ಪಾತ್ರ (2) ಅಧ್ಯಾಪನ ಒಂದು ವೃತ್ತಿಯೇ ? ಸಾಮಾಜಿಕ ಹೊಣೆಗಾರಿಕೆಯೇ ? (3) ವಿದ್ಯಾರ್ಥಿಗಳ ಮೌಲ್ಯವರ್ಧನೆಯಲ್ಲಿ ಶಿಕ್ಷಕಿಯ ವಿಶೇಷ ಪಾತ್ರ.

ಸಂಪನ್ಮೂಲ ವ್ಯಕ್ತಿಗಳು : ಡಾ. ಸುಧಾ ರಾವ್ – ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ಆಯೋಗ
ಡಾ. ಗುರುರಾಜ ಕರ್ಜಗಿ – ಅಧ್ಯಕ್ಷರು, ಅಕಾಡೆಮಿ ಫಾರ್ ಕ್ರಿಯೇಟೀವ್ ಟೀಚಿಂಗ್

ಸ್ಥಳ : ಆರ್. ವಿ. ಟೀಚರ್ಸ್ ಕಾಲೇಜು ಸಭಾಂಗಣ, ಜಯನಗರ, ಬೆಂಗಳೂರು

ಸಮಯ : ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3.30ರವರೆಗೆ.

ರಾಜ್ಯದ ಎಲ್ಲ ಶಿಕ್ಷಕಿಯರಿಗೆ ಭಾಗವಹಿಸಲು ಆದರದ ಆಹ್ವಾನ. OOD ಸೌಲಭ್ಯವಿದೆ.

ಶ್ರೀಮತಿ ಆರ್. ಸೀತಾಲಕ್ಷ್ಮಿ, ರಾಷ್ಟ್ರೀಯ ಜಂಟಿ ಪ್ರಧಾನ ಕಾರ್ಯದರ್ಶಿ, ಮಹಿಳಾ ವಿಭಾಗ, ಎಬಿಆರ್‌ಎಸ್‌ಎಂ.

# ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014

ಸಹಾಯಾನುದಾನಕ್ಕೆ ಒಳಪಡುವ ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಭತ್ಯೆ ಮತ್ತು ಇತರೆ ಸೇವಾ ಷರತ್ತುಗಳನ್ನು ನಿಯಂತ್ರಿಸಲು ಹಾಗೂ ರಾಜ್ಯದ ಆರ್ಥಿಕ ಹೊಣೆಗಾರಿಕೆಯನ್ನು ಮಿತಿಗೊಳಿಸಲು ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳಿಗಾಗಿ ಒಂದು ವಿಧೇಯಕ.

ಸರ್ಕಾರವು ಸಹಾಯಾನುದಾನಕ್ಕೆ ಸೇರುವ ದಿನಾಂಕದಂದು ರಾಜ್ಯದಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದಲ್ಲಿ ಸಹಾಯಾನುದಾನವನ್ನು ವಿಸ್ತರಿಸುವ ಮತ್ತು ಹುದ್ದೆಗಳಿಗೆ ಮಂಜೂರಾದ ಸಹಾಯಾನುದಾನದಷ್ಟರಮಟ್ಟಿಗೆ ಮುಂಬಡ್ತಿ ಯೋಜನೆಗಳ ಮೇಲೆ ರಾಜ್ಯದ ಹೊಣೆಗಾರಿಕೆ ಯನ್ನು ಮಿತಿಗೊಳಿಸುವ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳ ಸಂಬಂಧದಲ್ಲಿ ನಿರ್ಧಾರವನ್ನು ಕೈಗೊಳ್ಳಲಾಯಿತು.

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮವಾಗತಕ್ಕದ್ದು, ಎಂದರೆ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗೀ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ, 2014 ಎಂದು ಕರೆಯತಕ್ಕದ್ದು. (2) ಇದು 1995 ರ ಜೂನ್ 1 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು– (ಎ) 'ಸ್ವಯಂಚಾಲಿತ ಅಥವಾ ಕಾಲಬದ್ಧ ಮುಂಬಡ್ತಿ ಯೋಜನೆ' ಎಂದರೆ ಒಂದು ಹುದ್ದೆಯಲ್ಲಿ ನಿರ್ದಿಷ್ಟ ಸೇವಾವಧಿಯನ್ನು ಪೂರ್ಣಗೊಳಿಸಿದ ತರುವಾಯ ಶೈಕ್ಷಣಿಕ ಸಂಸ್ಥೆಯೊಂದರ ಸಿಬ್ಬಂದಿಗೆ ಮಂಜೂರು ಮಾಡುವ ಉನ್ನತ ವೇತನ ಶ್ರೇಣಿಗಳು; (ಬಿ) 'ನೌಕರಿ ಮುಂಬಡ್ತಿ ಯೋಜನೆ' ಎಂದರೆ, ಕಾಲೇಜು ಅಥವಾ ಬಿ.ಎಡ್., ಕಾಲೇಜು ಅಥವಾ ತಾಂತ್ರಿಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು, ಗ್ರಂಥಪಾಲರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಿಗೆ ಒಂದು ಹುದ್ದೆಯಲ್ಲಿ ನಿರ್ದಿಷ್ಟ ಸೇವಾವಧಿಯನ್ನು ಪೂರೈಸಿದ ತರುವಾಯ ಮಂಜೂರು ಮಾಡುವ ಉನ್ನತ ವೇತನ ಶ್ರೇಣಿಗಳು. (ಸಿ) "ಶೈಕ್ಷಣಿಕ ಸಂಸ್ಥೆ" ಎಂದರೆ ಯಾವುದೇ ವ್ಯಕ್ತಿಗಳ ನಿಕಾಯ ಸ್ಥಾಪಿಸಿ ನಿಯಂತ್ರಿಸುತ್ತಿರುವ ಅಥವಾ ನಿರ್ವಹಿಸುತ್ತಿರುವ ಮತ್ತು ರಾಜ್ಯ ಸರ್ಕಾರವು ಮಾನ್ಯತೆ ನೀಡಿರುವ ಮತ್ತು ಎಲ್ಲೆಲ್ಲಿ ಅನ್ವಯವಾಗುವುದೋ ಅಲ್ಲಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಪದವಿ, ಡಿಪ್ಲೋಮೊ ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳ ಶಿಕ್ಷಣವನ್ನು ನೀಡುವ ಕಾಲೇಜುಗಳು ಅಥವಾ ತಾಂತ್ರಿಕ ಸಂಸ್ಥೆಗಳು ಅಥವಾ ಬಿ.ಎಡ್. ಕಾಲೇಜುಗಳು ಒಳಗೊಂಡಂತೆ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಕಾಲೇಜುಗಳು ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಣವನ್ನು ನೀಡುತ್ತಿರುವ ಶೈಕ್ಷಣಿಕ ಸಂಸ್ಥೆಗಳು. (ಡಿ) 'ಸಿಬ್ಬಂದಿ' ಎಂದರೆ ಶೈಕ್ಷಣಿಕ ಸಂಸ್ಥೆಯ ಒಬ್ಬ ಸಿಬ್ಬಂದಿ ; (ಇ) 'ಸರ್ಕಾರ ಎಂದರೆ ಕರ್ನಾಟಕ ಸರ್ಕಾರ' (ಎಫ್) 'ಸಹಾಯಾನುದಾನ' ಎಂದರೆ ಖಾಸಗಿ ಶೈಕ್ಷಣಿಕ ಸಂಸ್ಥೆಯಲ್ಲಿ ಯಾವುದೇ ಹುದ್ದೆಗಳಿಗೆ ರಾಜ್ಯನಿಧಿಯಿಂದ ವೇತನ ಅನುದಾನ ಎಂದು ಸಂದಾಯ ಮಾಡುವ ಹಣದ ಯಾವುದೇ ಮೊತ್ತ ಮತ್ತು (ಜಿ) 'ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆ' ಎಂದರೆ ರಾಜ್ಯ ಸರ್ಕಾರದಿಂದ ಸಹಾಯಾನುದಾನವನ್ನು ಸ್ವೀಕರಿಸುವ ಶೈಕ್ಷಣಿಕ ಸಂಸ್ಥೆ.

(2) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಇತರ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಶಿಕ್ಷಣ ಅಧಿನಿಯಮ 1983 ರಲ್ಲಿ (1995 ರ ಕರ್ನಾಟಕ ಅಧಿನಿಯಮ 1) ಇದರಲ್ಲಿ ಅವುಗಳಿಗೆ ಗೊತ್ತುಪಡಿಸಿದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಕಾಲಿಕ ವೇತನ ಶ್ರೇಣಿಯಲ್ಲಿ ಕನಿಷ್ಠ ಸಹಾಯಾನುದಾನದ,** ಕಾಲಬದ್ಧ ಮುಂಬಡ್ತಿಯ, ನೌಕರಿಯ ಮುಂಬಡ್ತಿಯ ಮಂಜೂರಾತಿ ಮತ್ತು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಅರ್ಹತಾ ದಾಯಕ ವರ್ಷಗಳೆಂದು ಲೆಕ್ಕಕ್ಕೆ ತೆಗೆದುಕೊಳ್ಳದೇ ನಿವೃತ್ತಿ ಸೌಲಭ್ಯಗಳ ನಿರ್ಧಾರ ಹಾಗೂ ಕ್ಲೇಮುಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ರದ್ದುಗೊಳಿಸುವುದು– (1) ಕರ್ನಾಟಕ ಶಿಕ್ಷಣ ಅಧಿನಿಯಮ 1983 ರಲ್ಲಿ ಸರ್ಕಾರದ ಯಾವುದೇ ಆದೇಶ ಅಥವಾ ಯಾವುದೇ ಶೈಕ್ಷಣಿಕ ಸಂಸ್ಥೆಯ ಸಿಬ್ಬಂದಿಗಳ ಸೇವಾಷರತ್ತುಗಳ ನಿಯಮಗಳು ಅಥವಾ ಮೇಲಿನ ನೌಕರ ವರ್ಗಕ್ಕೆ ಸಹಾಯಾನುದಾನವನ್ನು ನಿಯಂತ್ರಿಸುತ್ತಿರುವ ಯಾವುದೇ ಆದೇಶ ಅಥವಾ ಯಾವುದೇ ಶೈಕ್ಷಣಿಕ ಸಂಸ್ಥೆಯ ಸಿಬ್ಬಂದಿಗಳ ಸೇವಾ ಷರತ್ತುಗಳ ನಿಯಮಗಳು ಅಥವಾ ಮೇಲಿನ ನೌಕರ

ಪುಟ 16 ಕ್ಕೆ ➢

➢ ಪುಟ 15 ರಿಂದ.....



ವರ್ಗಕ್ಕೆ ಸಹಾಯಾನುದಾನವನ್ನು ನಿಯಂತ್ರಿಸುತ್ತಿರುವ ಯಾವುದೇ ಇತರ ಕಾನೂನು ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಇದ್ದರೂ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಯ ಸಿಬ್ಬಂದಿಯು ಹೊಂದಿದ ಹುದ್ದೆಗೆ ಮಂಜೂರಾಗಬಹುದಾದ ಸಹಾಯಾನುದಾನವನ್ನು, ಸಹಾಯಾನುದಾನಕ್ಕೆ ಸೇರಿಸಲಾದ ದಿನಾಂಕದಿಂದ ಹುದ್ದೆಗೆ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದಲ್ಲಿ ನಿಗದಿಮಾಡತಕ್ಕದ್ದು. ಮತ್ತು ಲೆಕ್ಕ ಹಾಕತ್ತಕ್ಕದ್ದು. ಹಾಗೂ ವೇತನ, ರಜೆ, ಜೇಷ್ಠತೆ ಮತ್ತು ನಿವೃತ್ತಿ ವೇತನ ಉದ್ದೇಶಕ್ಕಾಗಿ ಸಹಾಯಾನುದಾನಕ್ಕೆ ಸೇರುವುದಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ಲೆಕ್ಕಹಾಕತಕ್ಕದ್ದಲ್ಲ. ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳನ್ನು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕಕ್ಕೆ ತೆಗೆದುಕೊಳ್ಳದೆ ನಿರ್ಧರಿಸತಕ್ಕದ್ದು. ಹಾಗೂ ಅಂತಹಾ ಸಿಬ್ಬಂದಿಗೆ ಸ್ವಯಂಚಾಲಿತ ಮುಂಬಡ್ತಿ ಯೋಜನೆ ಮತ್ತು ನೌಕರಿ ಮುಂಬಡ್ತಿ ಯೋಜನೆ ವಿಸ್ತರಣೆಯು ಯಾವುದಾದರೂ ಇದ್ದಲ್ಲಿ, ಅದರ ಸಂಬಂಧದಲ್ಲಿನ ಸರ್ಕಾರದ ಆರ್ಥಿಕ ಹೊಣೆಗಾರಿಕೆಯು ಆ ಹುದ್ದೆಗೆ ಮಂಜೂರಾದ ಸಹಾಯಾನುದಾನದ ಅಗತ್ಯ ಪರಿಮಾಣಕ್ಕೆ ಅನುಸಾರವಾಗಿ ಮಿತಿಗೊಳ್ಳತಕ್ಕದ್ದು. (2) ಸರ್ಕಾರದ ಯಾವುದೇ ಆದೇಶ ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಯಾವುದೇ ತೀರ್ಪಿನಲ್ಲಿ ಏನೇ ಇದ್ದರೂ, ಸಹಾಯಾನುದಾನಕ್ಕೆ ಹುದ್ದೆಯು ಸೇರಿರುವ ದಿನಾಂಕಕ್ಕೆ ಮೊದಲು ಪಡೆದ ವೇತನ ಬಡ್ತಿಗಳನ್ನು ಲೆಕ್ಕಹಾಕುವುದರ ಮೂಲಕ ಸಹಾಯಾನು ದಾನವನ್ನು ಬಿಡುಗಡೆಗೊಳಿಸುವುದಕ್ಕಾಗಿ ಮತ್ತು ಅನುದಾನರಹಿತ ಅವಧಿಗೆ ಸಲ್ಲಿಸಿದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕ ಹಾಕುವ ಮೂಲಕ ನಿವೃತ್ತಿ ವೇತನ ಪ್ರಯೋಜನಗಳನ್ನು ಅಂತಿಮಗೊಳಿಸುವುದಕ್ಕಾಗಿ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ ಕ್ಲೇಮುಗಳು ರದ್ದಾಗತಕ್ಕದ್ದು. ಮತ್ತು ಅದಕ್ಕನುಸಾರವಾಗಿ –

(ಎ) ಸಹಾಯಾನುದಾನಕ್ಕೆ ಹುದ್ದೆಯು ಸೇರುವ ದಿನಾಂಕಕ್ಕೆ ಮೊದಲು ಸಿಬ್ಬಂದಿಯು ಗಳಿಸಿದ ವೇತನ ಬಡ್ತಿಗಳನ್ನು ಲೆಕ್ಕಕ್ಕೆ ತೆಗೆದು ಕೊಳ್ಳುವಂತೆ ಅಥವಾ ಕಾಲಬದ್ಧ ಮುಂಬಡ್ತಿ ಯೋಜನೆ ಅಥವಾ ಸ್ವಯಂಚಾಲಿತ ಬಡ್ತಿ ಅಥವಾ ನೌಕರಿ ಮುಂಬಡ್ತಿ ಯೋಜನೆಯ ವಿಸ್ತರಣೆಯ ಮೇಲೆ ಹೆಚ್ಚುವರಿ ಮೊತ್ತದ ಸಂದಾಯಕ್ಕಾಗಿ ಸಹಾಯಾನುದಾನವನ್ನು ಬಿಡುಗಡೆಗೊಳಿಸುವಾಗ ಮತ್ತು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕಹಾಕುವ ಮೂಲಕ ನಿವೃತ್ತಿ ವೇತನ ಪ್ರಯೋಜನಗಳನ್ನು ಅಂತಿಮಗೊಳಿಸುವುದಕ್ಕಾಗಿ ನಿರ್ದೇಶನ ನೀಡಿ ಸರ್ಕಾರವು ಹೊರಡಿಸಿದ ಆದೇಶಗಳು ರದ್ದುಗೊಳ್ಳತಕ್ಕದ್ದು.

ಪರಂತು, ಈಗ ರದ್ದಾಗಿರುವ ಆದೇಶದ ಅನ್ವಯ ಮತ್ತು ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂಚಾಲಿತ ಮುಂಬಡ್ತಿ ಅಥವಾ ನೌಕರಿ ಮುಂಬಡ್ತಿ ಯೋಜನೆಗಳು ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳ ಸಂಬಂಧಗಳಲ್ಲಿ ಪಾವತಿಮಾಡಲಾದ ಯಾವುದೇ ಮೊತ್ತವನ್ನು ವಸೂಲಿ ಮಾಡತಕ್ಕದ್ದಲ್ಲ.

(ಬಿ) ಸಹಾಯಾನುದಾನಕ್ಕೆ ಸೇರುವ ದಿನಾಂಕಕ್ಕೆ ಮೊದಲು ಸದರಿ ಹುದ್ದೆಯಲ್ಲಿ ಗಳಿಸಲಾದ ವೇತನ ಬಡ್ತಿಗಳನ್ನು ಸಹಾಯಾನುದಾನದ ಬಿಡುಗಡೆಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವಂತೆ ಅಥವಾ ಕಾಲಬದ್ಧ ಮುಂಬಡ್ತಿ ಯೋಜನೆ ಅಥವಾ ಸ್ವಯಂಚಾಲಿತ ಬಡ್ತಿ ಯೋಜನೆ ಅಥವಾ ಸ್ವಯಂಚಾಲಿತ ಮುಂಬಡ್ತಿ ಯೋಜನೆ ಮತ್ತು ನೌಕರಿ ಮುಂಬಡ್ತಿ ಯೋಜನೆಯ ವಿಸ್ತರಣೆಗಾಗಿನ ಹೆಚ್ಚುವರಿ ಮೊತ್ತವನ್ನು ಸಂದಾಯ ಮಾಡುವುದಕ್ಕಾಗಿ ಮತ್ತು ಹುದ್ದೆಗೆ ಮಂಜೂರಾದ ಸಹಾಯಾನುದಾನದ ಅಗತ್ಯ ಪರಿಮಾಣವನ್ನು ಹೊರತುಪಡಿಸಿ, ಅನುದಾನ ರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಅಂಥ ಸಿಬ್ಬಂದಿಗೆ ಅರ್ಹತಾದಾಯಕ ವರ್ಷಗಳೆಂದು ಲೆಕ್ಕಹಾಕುವ ಮೂಲಕ ನಿವೃತ್ತಿ ವೇತನಗಳ ಪ್ರಯೋಜನಗಳನ್ನು ಅಂತಿಮಗೊಳಿಸುವುದಕ್ಕಾಗಿ ಕ್ಲೇಮು ಮಾಡುವ ಖಾಸಗೀ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಯಾವೊಬ್ಬ ಸಿಬ್ಬಂದಿಯು ಸರ್ಕಾರದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಅಥವಾ ಮಾಡಲಾದ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಮಾಡತಕ್ಕದಲ್ಲ ಅಥವಾ ಮುಂದುವರಿಯತಕ್ಕದಲ್ಲ.

(ಸಿ) ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಯಾವೊಬ್ಬ ಸಿಬ್ಬಂದಿ ಪರವಾಗಿ ಸಹಾಯಾನುದಾನಕ್ಕೆ ಸೇರುವ ದಿನಾಂಕಕ್ಕೆ ಮೊದಲು, ಹುದ್ದೆಯಲ್ಲಿ ಗಳಿಸಿದ ವೇತನ ಬಡ್ತಿಗಳನ್ನು ಸಹಾಯಾನುದಾನದ ಬಿಡುಗಡೆಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವಂತೆ ಮತ್ತು ಹುದ್ದೆಗೆ ಮಂಜೂರಾದ ಸಹಾಯಾನುದಾನದ ಅಗತ್ಯ ಪರಿಮಾಣವನ್ನು ಹೊರತುಪಡಿಸಿ, ಅಂಥ ಸಿಬ್ಬಂದಿಗೆ, ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂಚಾಲಿತ ಬಡ್ತಿ ಅಥವಾ ಸ್ವಯಂಚಾಲಿತ ಮುಬಂಡ್ತಿ ಯೋಜನೆ ಅಥವಾ ನೌಕರಿ ಮುಂಬಡ್ತಿ ಯೋಜನೆಯ ವಿಸ್ತರಣೆಯ ಹೆಚ್ಚುವರಿ ಮೊತ್ತದ ಸಂದಾಯಕ್ಕಾಗಿ ಮತ್ತು ಅನುದಾನ ರಹಿತ ಅವಧಿಗೆ ಸಲ್ಲಿಸಲಾದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕಹಾಕುವ ಮೂಲಕ ನಿವೃತ್ತಿ ವೇತನಗಳ ಪ್ರಯೋಜನಗಳನ್ನು ಅಂತಿಮಗೊಳಿಸುವುದಕ್ಕಾಗಿ ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಯಾವುದೇ ನ್ಯಾಯಾಲಯವು ಜಾರಿಗೊಳಿಸತಕ್ಕದ್ದಲ್ಲ.

■

➢ ಪುಟ 9 ರಿಂದ..... ವಿವೇಕಾನಂದ

ಈ ದೇಶದ ಸಮಸ್ಯೆಗಳೇನು ಅಂತ ಕೇಳಿದಾಗ, ಬಡತನ, ನಿರುದ್ಯೋಗ, ಅನಕ್ಷರತೆ ಎಂಬೆಲ್ಲ ಉತ್ತರಗಳು ಹೊರಬರುತ್ತವೆ. ಆದರೆ, ನನಗನ್ನಿಸೋದು ಈ ದೇಶದ ಮೂಲ ಸಮಸ್ಯೆಗಳು ನೈತಿಕತೆ, ಪ್ರಾಮಾಣಿಕತೆ, ರಾಷ್ಟ್ರೀಯತೆಗಳ ಅಭಾವ ಒಂದೇ. ಪಾಶ್ಚಾತ್ಯತೆಯ ವೇಗದಲ್ಲಿ ಇವೆಲ್ಲವನ್ನೂ ಕಳೆದುಕೊಂಡಿರುವ ಈಗಿನ ಪೀಳಿಗೆಗೆ, ಮತ್ತೆ ನೈತಿಕತೆಯ ಪಾಠವನ್ನು ಬೋಧಿಸಬಲ್ಲ ವ್ಯಕ್ತಿತ್ವವಿದ್ದರೆ, ಅದು ವಿವೇಕಾನಂದರೆ.. ಯುವಕರಿಗಾಗಿ ತುಡಿಯುತ್ತಿದ್ದ ಅವರು, ದೈಹಿಕವಾಗಿಯೂ, ಮಾನಸಿಕ ವಾಗಿಯೂ ಸದೃಢವಾದ ಯುವಕರಿಂದಷ್ಟೇ ಭಾರತದ ಪ್ರಗತಿ ಸಾಧ್ಯ ಅನ್ನೋದನ್ನು ಸಾರಿ ಸಾರಿ ಹೇಳಿದ್ದರು. ಇವತ್ತು ವಿವೇಕಾನಂದರಿಂದ ಪ್ರಭಾವಿತರಾದ ಯುವಕರೆಷ್ಟೋ.! ಸ್ವಾರ್ಥ–ದ್ವೇಷಗಳ– ಅನ್ಯಾಯಗಳ ಸಮೂಹದಲ್ಲೇ ಇದ್ದರೂ, ಇಂದಿಗೂ ರಾಷ್ಟ್ರಭಕ್ತಿ, ಆದರ್ಶ ವಿಚಾರಗಳು ಪ್ರಜ್ವಲಿಸುತ್ತಿವೆ ಅಂದರೆ, ಅದರ ಹಿಂದೆ ವಿವೇಕಾನಂದರು ಅಂದು ಮಾಡಿದ ಬೋಧನೆ, ದೇಶದ ಜನರ ಜಾಗೃತಿ ಇವೆಲ್ಲದರ ಶ್ರಮವೇ ಸ್ಪಷ್ಟವಾಗಿ ಗೋಚರಿಸುತ್ತಿದೆ.

**ಅಕಸ್ಮಾತ್ ವಿವೇಕಾನಂದರು ಹುಟ್ಟದೆ ಇದ್ದಿದ್ದರೆ, ಪಾಶ್ಚಾತ್ಯರ ಕಣ್ಣಲ್ಲಿ ನಮ್ಮ ನಾಡಿನ ಗೌರವ, ಸ್ಥಾನ–ಮಾನ ಹೆಚ್ಚುತ್ತಿರಲಿಲ್ಲ. ನಿವೇದಿತಾ ಮುಂತಾದ ವಿದೇಶಿಯರು ಭಾರತದ ಸೇವೆಗೆ ಒದಗುತ್ತಿರಲಿಲ್ಲ. ಆಂತರಿಕ ಮತ್ತು ಬಾಹ್ಯ ಆಕ್ರಮಣಗಳಿಂದ ಜರ್ಝರಿತವಾಗಿದ್ದ ಹಿಂದೂ ಧರ್ಮ ಮತ್ತೆ ಯುವಕರೆದೆಯಲ್ಲಿ ಅರಳುತ್ತಿರಲಿಲ್ಲ. ಹಿಂದುತ್ವದ ನವೀನ ಪರಿಕಲ್ಪನೆ ಲಭಿಸುತ್ತಿರಲಿಲ್ಲ. ಅಹಿಂಸೆಯೊಂದರಿಂದಲೇ ಎಲ್ಲ ಸಾಧಿಸಿಬಹುದೆನ್ನುವವರ ನಡುವೆ, ಕ್ಷಾತ್ರ ತೇಜಸ್ಸನ್ನು ಪುನಃ ನಿರ್ಮಾಣ ಮಾಡಲಾಗುತ್ತಿರಲಿಲ್ಲ. ದೇಶಕ್ಕಾಗಿ ಮನೆ–ಮಠ ಗಳನ್ನೂ ತೊರೆದು ಸಂಪೂರ್ಣ ಬಲಿದಾನಕ್ಕಾಗಿ ಸಿದ್ಧರಾದ ಅದೆಷ್ಟೋ ಕ್ರಾಂತಿಕಾರಿಗಳ ಉಗಮವಾಗುತ್ತಿರಲಿಲ್ಲ. ಭಾರತೀಯರ ಮನಸ್ಸಿನಲ್ಲಿ ಐಕ್ಯದ ಭಾವ ಪ್ರಜ್ವಲಿಸುತ್ತಿರಲಿಲ್ಲ. ಧರ್ಮದ ಜೊತೆಗೆ ತಂತ್ರಜ್ಞಾನವೂ ಬೇಕೆಂಬ ಅಭಿಲಾಷೆ ಹೊಮ್ಮುತ್ತಿರಲಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ದೇಶವನ್ನು ಕೇವಲ ಒಂದು ಭೂಪ್ರದೇಶವಾಗಿ ನೋಡದೆ, ಅಲ್ಲೊಂದು ಮಾತೃಸ್ವರೂಪವನ್ನು ಕಾಣುವ ದೃಷ್ಟಿ ನಮಗೆ ಸಿಗುತ್ತಿರಲಿಲ್ಲ..!!**

ಈ ದಿಶೆಯಲ್ಲಿ ವಿವೇಕಾನಂದರು ಅಭಿನವ ಭಾರತದ ಸೃಷ್ಟಿಕರ್ತರೇ. ಪ್ರಾಚೀನತೆಯ ಮಡಿಲಲ್ಲಿ ನವೀನತೆಯ ಭಾವವನ್ನು ಉದ್ದೀಪನಗೊಳಿಸಿದವರು ಅವರೇ. ವಿವೇಕಾನಂದರ 150 ನೆ ಜನ್ಮದಿನಾಚರಣೆಯ ಸಂದರ್ಭದಲ್ಲಿ, ಈ ರಾಷ್ಟ್ರದ ಮನೆ–ಮನಗಳಲ್ಲಿ ಮತ್ತೆ ಅವರ ಚಿಂತನೆಗಳು ಸಂಭವಿಸಬೇಕಾಗಿದೆ. ತನ್ಮೂಲಕ ಶಕ್ತಿಯುತ ರಾಷ್ಟ್ರ ನಿರ್ಮಾಣದೆಡೆಗೆ ನಾವು ಮುನ್ನುಗ್ಗಬೇಕಿದೆ.

**ವಂದೇ ಮಾತರಂ..!!** ■

➢ ಪುಟ 5 ರಿಂದ..... ಜೀವನದಿ

ಹಮ್ಮಿಕೊಳ್ಳುವುದು. ಸಹಜವೇ. ಅಂತೆಯೇ ಈ ಕಾರ್ಯಕ್ರಮದಲ್ಲಿ ಸ್ವಾಮಿ ವೀರಾಶ್ವರಾನಂದ ಸರಸ್ವತಿಗಳು, ಶ್ರೀ ಕೃ. ಸೂರ್ಯನಾರಾಯಣ ರಾವ್, ಶ್ರೀ ಕೃ.ನರಹರಿ ಮುಂತಾದ ಹಿರಿಯರು, ಆತ್ಮೀಯರು ಶುಭ ಹಾರೈಸಿದರು.

ಒಬ್ಬ ಶಿಕ್ಷಕನಿಗೆ ಎಲ್ಲಕ್ಕಿಂತ ಹೆಚ್ಚಿನ ಸಂತೋಷ ತೃಪ್ತಿ ನೀಡುವುದು. ಅವರ ಶಿಷ್ಯರ ಪ್ರೀತಿ, ಆದರಗಳು. ಶ್ರೀ ಹೆಚ್.ಎನ್.ಆರ್. 70 ರ ಶುಭ ಸಂದರ್ಭದಲ್ಲಿ ಅವರ ವಿದ್ಯಾರ್ಥಿ ಗಳೆಲ್ಲ ಸೇರಿ ಅಭಿನಂದನಾ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜಿಸಿದ್ದು ಎಲ್ಲರಿಗೂ ಹೆಚ್ಚಿನ ಸಂತಸವನ್ನು ನೀಡಿತು. ಅಭಿನಂದನೆ ಕೇವಲ ಭಾಷಣ, ಊಟಕ್ಕೆ ಮಾತ್ರ ಸೀಮಿತವಾಗಿರದೆ 'ಜೀವನದಿ' ಅಭಿನಂದನಾ ಗ್ರಂಥ ಸಮರ್ಪಣೆ, ಅದಕ್ಕಿಂತ ಹೆಚ್ಚಾಗಿ ಶ್ರೀ ಹೆಚ್.ಎನ್.ಆರ್. ಕುರಿತ ಸಾಕ್ಷಿಚಿತ್ರ ತಯಾರಿಸಿ ದುದು ತುಂಬಾ ವಿಶೇಷವಲ್ಲವೇ? ದಿನಾಂಕ:17.1.2014 ರಂದು ಪೆಸಿಟ್ ಸಭಾಂಗಣದಲ್ಲಿ ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ ಶ್ರೀಮತಿ ಪಲ್ಲವಿಯವರ ಸುಶ್ರಾವ್ಯ ಗಾಯನ ಎಲ್ಲರನ್ನೂ ಆಕರ್ಷಿಸಿತು. ನಂತರ ಸಭಾ ಕಾರ್ಯಕ್ರಮ. ಹಿರಿಯ ವಕೀಲರು ಮತ್ತು ಹಿರಿಯ ವಿದ್ಯಾರ್ಥಿ ಶ್ರೀ ವೈ.ಕೆ. ರಾಘವೇಂದ್ರರಾವ್, ಶ್ರೀ ಹೆಚ್.ವಿ ಹರೀಶ್ ಹಾಗೂ ಶ್ರೀಯೋಗೇಶ್ವರಾನಂದ ಸರಸ್ವತಿ ಸ್ವಾಮೀಜಿಯವರು ಶ್ರೀ ಹೆಚ್.ಎನ್.ಆರ್. ದಂಪತಿಯೊಂದಿಗೆ ಆಸೀನರಾಗಿದ್ದರು. ವಿಶೇಷವೆಂದರೆ ವೇದಿಕೆಯಲ್ಲಿದ್ದವರೆಲ್ಲಾ ನ್ಯಾಷನಲ್ ಪ್ರೌಢಶಾಲೆಯ ಸವಿನೆನಪುಗಳನ್ನು ಮೆಲಕು ಹಾಕಿದವರು. ಶ್ರೀ ಹೆಚ್.ಎನ್.ಆರ್. ಹಿತೈಷಿಗಳು, ವಿದ್ಯಾರ್ಥಿ ಗಳು ತಮ್ಮ ಅನುಭವಗಳನ್ನು ಹಂಚಿಕೊಂಡು ಖುಷಿಪಟ್ಟರು. ಶ್ರೀ ಹೆಚ್.ಎನ್.ಆರ್. ದಂಪತಿಗಳನ್ನು ಆತ್ಮೀಯವಾಗಿ ಸನ್ಮಾನಿಸ ಲಾಯಿತು. ಈ ಎಲ್ಲಾ ಸಾಧನೆಯ ಶ್ರೀ ಹೆಚ್.ಎನ್.ಆರ್.ರವರಿಗೆ ಶಿಕ್ಷಕ ಸಮಾಚಾರದ ಆತ್ಮೀಯ ಅಭಿನಂದನೆಗಳು. ಇವರ ಮಾರ್ಗದರ್ಶನ ಪತ್ರಿಕೆಗೆ ಇನ್ನೂ ಹೆಚ್ಚಾಗಿ ಲಭಿಸಲೆಂದು ಆಶಿಸುತ್ತೇವೆ.

**ಸಂಪಾದಕರು, ಶಿಕ್ಷಕ ಸಮಾಚಾರ**

## ವಿದ್ಯಾರ್ಥಿ ಮಿತ್ರ – 3 ರ ಉತ್ತರ

**1. ರಸಪ್ರಶ್ನೆ :** ಅ) ವೇದಾವತಿ ನದಿ ; ಆ) ಘಟಪ್ರಭಾ ನದಿ ; ಇ) ಕೃಷ್ಣಾ ನದಿ ; ಈ) ಶರಾವತಿ ನದಿ ; ಉ) ಅರ್ಕಾವತಿ ನದಿ

**2. ಇವರು ಯಾರು ಬಲ್ಲಿರಾ ?** 1) ಗಂಗೂಬಾಯಿ ಹಾನಗಲ್ ; 2) ಪಂಡಿತ್ ಭೀಮಸೇನ್ ಜೋಷಿ ; 3) ಮಲ್ಲಿಕಾರ್ಜುನ ಮನ್ಸೂರ್ ; 4) ಪುಟ್ಟರಾಜ ಗವಾಯಿ

**3. ಈ ಒಗಟುಗಳನ್ನು ಬಿಡಿಸಬಲ್ಲಿರಾ ?** 1. ಕಣ್ಣು ; 2. ಜರಡಿ ; 3. ತುಟಿಗಳು ; 4. ಋಣ, ನೂಲು ; 5. ಈರುಳ್ಳಿ ಸಿಪ್ಪೆ

**4. ಪದಬಂಧ :** ದಾಸವಾಳ, ಮಲ್ಲಿಗೆ, ಕನಕಾಂಬರ, ಕೇದಿಗೆ, ಕಮಲ, ನೀಲಾಂಬರ, ನೈದಿಲೆ, ಸುಗಂಧರಾಜ, ಸಂಪಿಗೆ, ಮರುಗ, ಗುಲಾಬಿ, ಸ್ಫಟಿಕ.


# ವಿದ್ಯಾರ್ಥಿ ಮಿತ್ರ – 4

## 1. ರಸಪ್ರಶ್ನೆ

ಡಾ. ಬಿ. ಆರ್. ಅಂಬೇಡ್ಕರ್‌ರವರಿಗೆ ಆಧುನಿಕ ಮನು, ಸಂವಿಧಾನ ಶಿಲ್ಪಿ ಮುಂತಾದ ಬಿರುದು ಗಳಿದ್ದವು. ಹಾಗೆಯೇ ಈ ಕೆಳಕಂಡ ಮಹಾಪುರುಷರಿಗೆ ಇದ್ದ ಬಿರುದುಗಳನ್ನು ಹೇಳಬಲ್ಲಿರಾ ?


ಅ) ವಲ್ಲಭಭಾಯಿ ಪಟೇಲ್ ಆ) ಸರೋಜಿನಿ ನಾಯ್ಡು ಇ) ಸರ್. ಎಂ. ವಿಶ್ವೇಶ್ವರಯ್ಯ
ಈ) ಖಾನ್ ಅಬ್ದುಲ್ ಗಫಾರ್ ಖಾನ್ ಉ) ಜೆ. ಆರ್. ಡಿ. ಟಾಟಾ


## 2. ನೋಬೆಲ್ ಪ್ರಶಸ್ತಿ ಪುರಸ್ಕೃತ ಭಾರತೀಯರಾದ ಇವರನ್ನು ನೀವು ಬಲ್ಲಿರಾ ? ಇವರ ಹೆಸರುಗಳನ್ನು ತಿಳಿಸಿರಿ.










## 3. ಈ ಒಗಟುಗಳನ್ನು ಬಿಡಿಸಬಲ್ಲಿರಾ ?

1. ಸಾವಿರ ಎತ್ತಿಗೆ ಒಂದೇ ತೊಪ್ಪೆ
2. ಸಾಸಿವೆ ಗಾತ್ರದ ಕಲ್ಲು ಬಿದ್ದರೆ ಸಾವಿರ ರೂಪಾಯಿಯ ತೋಟ ಹಾಳು
3. ಸೊಂಡಿಲ ಮೂಗಿನ ರಾಜಕುಮಾರಿ, ಬಣ್ಣದ ಬೆಡಗಿನ ಸಿಂಗಾರಿ, ಹೂವಕ್ಕನ ಪಾಯಸ ಹೀರಿ, ಕುಪ್ಪಳಿಸಿ ಹಾಕುವ ಯಾರೀ ನಾರೀ.
4. ಹುಟ್ಟಿದ್ದು ಸೆರೆಮನೆ, ಸೇರಿದ್ದು ಅರಮನೆ
5. ಹೊಲವೆಲ್ಲ ಸುತ್ತಾಡಿ ಮೇಯೋದುಂಟು, ಸಗಣಿ ಹಾಕೋಲ್ಲ.

## 4. ಪದಬಂಧ

ಇದರಲ್ಲಿರುವ ನದಿಗಳ ಹೆಸರುಗಳನ್ನು ಪತ್ತೆ ಹಚ್ಚಿ ಎಡಕ್ಕೂ ಬಲಕ್ಕೂ, ಮೇಲಕ್ಕೂ, ಕೆಳಕ್ಕೂ, ಓರೆಯಾಗಿಯೂ ಅಕ್ಷರಗಳನ್ನು ಮಾದರಿಯಂತೆ ಜೋಡಿಸಿರಿ.

| | | | | | | | |
|---|---|---|---|---|---|---|---|
| ಜುಂ | ತುಂ | ನಿಂ | ಮಾ | ಲ | ತ | ರ | ಸಿ |
| ಗಂ | ಗಾ | ಕಾ | ಪಿ | ಲ | ಪ | ನೇ | ಬ್ರ |
| ಪಿ | ಭ | ಕ | ವೇ | ಲೆ | ತಿ | ತ್ರಾ | ಹ್ಮ |
| ನಾ | ದ್ರಾ | ಕೃ | ಷ್ಣ | ರಿ | ಮ | ವ | ಪು |
| ಕಿ | ಕಾ | ಮ | ಶ | ರಾ | ವ | ತಿ | ತ್ರ |
| ನಿ | ಳಿ | ಲ | ಗಿ | ಹೇ | ಮಾ | ವ | ತಿ |
| ಘ | ಟ | ಪ್ರ | ಭ | ವ | ಭೀ | ಲ | ತ |
| ಶ | ಗ | ಭ | ಅ | ರ್ಕಾ | ವ | ತಿ | ನಿ |

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಕೌಟುಂಬಿಕ ಮೌಲ್ಯಗಳನ್ನು ಕಲಿಸುವ ರೀತಿ

■ ಎಚ್ಚೆನ್ನಾರ್ – 9482014280

ಪಾಶ್ಚಾತ್ಯರ ಪರಿಕಲ್ಪನೆಯಲ್ಲಿ ಸಮಾಜದ ಅತ್ಯಂತ ಚಿಕ್ಕ ಘಟಕ ಎಂದರೆ 'ವ್ಯಕ್ತಿ'. ವ್ಯಕ್ತಿಗಳ ಸಮೂಹವೇ ಸಮಾಜ. ಆದರೆ ಭಾರತೀಯ ಪರಿಕಲ್ಪನೆಯಲ್ಲಿ ಸಮಾಜದ ಕನಿಷ್ಠ ಘಟಕ 'ಕುಟುಂಬ'. ಕುಟುಂಬಗಳ ಸಮೂಹವನ್ನೇ ನಾವು 'ಸಮಾಜ' ಎನ್ನುವುದು. ಸಮಾಜದ ಧಾರಣೆಗೆ ಕುಟುಂಬವೇ ಆಧಾರ. ಕುಟುಂಬದ ಅಡಿಪಾಯ ಗಟ್ಟಿಯಾಗಿದ್ದರೆ ಸಮಾಜ ಮಂದಿರವೂ ಭದ್ರ. ಅಂಥ ಸಮಾಜ ಮಂದಿರವು ಯಾವುದೇ ಪರಕೀಯ ಸಾಂಸ್ಕೃತಿಕ ಸುನಾಮಿಗೂ ಜಗ್ಗದು. ಕಳೆದ ಎರಡು ಸಾವಿರ ವರ್ಷಗಳ ಇತಿಹಾಸ ಇದಕ್ಕೆ ಸಾಕ್ಷಿ. ಗ್ರೀಕ್, ರೋಮ್ ಮುಂತಾದ ಸಮಾಜಗಳು ಇಂದು ಬದುಕುಳಿದಿಲ್ಲ. ಆದರೆ ಭಾರತೀಯ ಸಮಾಜ ಅಲ್ಪಸ್ವಲ್ಪ ಶಿಥಿಲಗೊಂಡರೂ ಇಂದಿಗೂ ಬದುಕುಳಿದಿರುವುದಂತೂ ದಿಟ. ಇದಕ್ಕೆ ನಮ್ಮ ಭದ್ರವಾದ ಕುಟುಂಬ ವ್ಯವಸ್ಥೆಯೇ ಕಾರಣ.

ಕುಟುಂಬವೆಂದರೆ ರಕ್ತಸಂಬಂಧವನ್ನು ಹೊಂದಿದ ಹಲವರು ಒಗ್ಗೂಡಿ ಒಂದೆಡೆ ವಾಸಿಸುವ ಗುಂಪಲ್ಲ. ಅದೊಂದು ಸಂಸ್ಥೆ. ಅದಕ್ಕೊಂದು ನಿರ್ದಿಷ್ಟ ಉದ್ದೇಶವಿದೆ. ಈ ಉದ್ದೇಶಕ್ಕೆ ಎರಡು ಮುಖ. ಮೊದಲನೆಯದು ವ್ಯಕ್ತಿ ನಿರ್ಮಾಣ. ಎರಡನೆಯದು ಸಮಾಜ ಪೋಷಣೆ.

ಕುಟುಂಬದ ಪ್ರಮುಖರು ತಂದೆ – ತಾಯಿ ಮನೆಯಲ್ಲಿ, ಅಜ್ಜ–ಅಜ್ಜಿ, ಚಿಕ್ಕಪ್ಪ–ಚಿಕ್ಕಮ್ಮ ಎಲ್ಲರೂ ಇದ್ದರೆ ಅದೊಂದು ಒಟ್ಟು ಕುಟುಂಬ. ಕುಟುಂಬದ ಮೌಲ್ಯಗಳು ಯಾವುವು ? ಅದನ್ನು ಮುಂದಿನ ಪೀಳಿಗೆಗೆ ಕಲಿಸುವ ರೀತಿ ಯಾವುದು ? ನಿಷ್ಠೆ, ಪ್ರೀತಿ, ವಿಶ್ವಾಸ, ಪರಸ್ಪರ ಸಹಕಾರ, ಸ್ವಾರ್ಥತ್ಯಾಗ, 'ನಾನು' ಎಂಬ ಭಾವ ಕಳೆದು 'ನಾವು' ಎಂಬ ಭಾವದ ಬೆಳವಣಿಗೆ ಇವೆಲ್ಲಾ ಪ್ರಮುಖವಾದ ಕೌಟುಂಬಿಕ ಮೌಲ್ಯಗಳು. ಇವಿಷ್ಟು ಮೌಲ್ಯಗಳು ವ್ಯಕ್ತಿ ನಿರ್ಮಾಣಕ್ಕೆ ಅಗತ್ಯವಾದುದು. ವ್ಯಕ್ತಿಯ ಭವಿಷ್ಯದ ಬದುಕಿನ ಆಧಾರ. ಈ ಮೌಲ್ಯಗಳು ಬೆಳೆಯುವುದೇ ಕುಟುಂಬದಿಂದ.

ಕುಟುಂಬದಲ್ಲಿ ಮಗುವಿಗೆ ತಾಯಿಯೇ ಮೊದಲ ಗುರು. 'ತಾಯಿ' ತನ್ನ ಕುಟುಂಬಕ್ಕಾಗಿ, ತನ್ನ ಸುಖ, ಸಂತೋಷಗಳನ್ನೆಲ್ಲಾ ಬದಿಗಿಡುವ 'ತ್ಯಾಗ'ದ ಪ್ರತಿಮೂರ್ತಿ. ಕೇವಲ ತನ್ನ ಆಚರಣೆಯಿಂದಲೇ ಆಕೆ ಮಕ್ಕಳಿಗೆ ದುಡಿಮೆ, ತ್ಯಾಗ, ಪ್ರೀತಿ, ಮುಂತಾದ ಮೌಲ್ಯಗಳನ್ನು ಕಲಿಸುತ್ತಾಳೆ. ನಮ್ಮ ನಾಡಿನ ಅನೇಕ ಮಹಾಪುರುಷರು ತಮ್ಮ ಯಶಸ್ಸಿಗೆ ತಮ್ಮ ತಾಯಿಯೇ ಕಾರಣ ಎಂದು ಹೇಳಿರುವ ಮಾತನ್ನು ನಾವು ಓದಿದ್ದೇವೆ, ಕೇಳಿದ್ದೇವೆ.

ಕುಟುಂಬದ ಬಂಡಿ ಓಡುವುದು ತಾಯಿ–ತಂದೆಯರೆಂಬ ಎರಡು ಚಕ್ರಗಳ ಆಧಾರದ ಮೇಲೆ. ಮೌಲ್ಯಗಳನ್ನು ಬಿತ್ತುವುದರಲ್ಲಿ ತಂದೆಯ ಪಾತ್ರವೂ ಕಡಿಮೆಯೇನಲ್ಲ.

ಇಂಥ ತ್ಯಾಗದ ಮೂರ್ತಿಗಳಿಗೆ ನಮ್ಮ ಪೂರ್ವಜರು 'ಮಾತೃ ದೇವೋ ಭವ', 'ಪಿತೃ ದೇವೋ ಭವ' ಎಂದು ದೈವತ್ವದ ಸ್ಥಾನವನ್ನು ಕಲ್ಪಿಸಿದ್ದಾರೆ.

ಕುಟುಂಬದ ಮೌಲ್ಯಗಳಲ್ಲಿ ಮುಖ್ಯವಾದುದೇ ತಂದೆ–ತಾಯಿಗಳನ್ನು ಆದರಿಸುವುದು, ಗೌರವಿಸುವುದು. ನಮ್ಮ ವಿದ್ಯಾರ್ಥಿಗಳಿಗೆ ಈ ಗುಣವನ್ನು ನಾವು ಕಲಿಸಲೇಬೇಕಲ್ಲವೇ ?

ವಿದ್ಯಾರ್ಥಿಗಳನ್ನು ಕುರಿತು ಮಾತನಾಡಲು ನಾನೊಂದು ಶಾಲೆಗೆ ಹೋಗಿದ್ದಾಗ, ನಾನು ಅಲ್ಲಿನ ಮಕ್ಕಳಿಗೆ 'ನೀವು ದೇವರನ್ನು ನೋಡಿದ್ದೀರಾ?' ಎಂಬ ಪ್ರಶ್ನೆ ಕೇಳಿದೆ. ಅವರೆಲ್ಲಾ ಕಕ್ಕಾಬಿಕ್ಕಿಯಾದರು. ನಾನು, ನಮ್ಮ ಜೀವನದಲ್ಲಿ ತಾಯಿ–ತಂದೆಯ ಪಾತ್ರವನ್ನು ವಿವರಿಸಿ ನಂತರ ಇದೇ ಪ್ರಶ್ನೆ ಕೇಳಿದಾಗ ಅವರೆಲ್ಲಾ 'ತಾಯಿ–ತಂದೆಯೇ ನಮಗೆ ದೇವರ ಸಮಾನ' ಎಂಬುದನ್ನು ಒಪ್ಪಿಕೊಂಡರು. ನಂತರ ಇಂಥಾ ದೇವರಿಗೆ ನಾವು ಪ್ರತಿನಿತ್ಯ ನಮಸ್ಕರಿಸುತ್ತೇವಾ ಎಂದು ಕೇಳಿದೆ. ಎಲ್ಲಾ ವಿದ್ಯಾರ್ಥಿಗಳೂ 'ನಾವು ಖಂಡಿತಾ ನಾಳೆಯಿಂದಲೇ ಈ ಕೆಲಸ ಮಾಡುತ್ತೇವೆ' ಎಂಬ ಆಶ್ವಾಸನೆ ನೀಡಿದರು. ನಮ್ಮ ವಿದ್ಯಾರ್ಥಿಗಳಿಗೂ ನಾವು ತಾಯಿ–ತಂದೆಗೆ ಪ್ರತಿನಿತ್ಯ ನಮಸ್ಕರಿಸಲು ತಿಳಿಸಬಹುದಲ್ಲವೇ?

'ನಾನಿಂದ' 'ನಾವಾಗುವ' ಮೌಲ್ಯವನ್ನು ಮೂಡಿಸಲು ಶಾಲೆಯಲ್ಲಿ ಹೀಗೊಂದು ಕಾರ್ಯಕ್ರಮ ರೂಪಿಸಬಹುದಲ್ಲವೇ ? ವಿದ್ಯಾರ್ಥಿಗಳ ಹುಟ್ಟುಹಬ್ಬದಂದು ಆಯಾ ವಿದ್ಯಾರ್ಥಿಗಳನ್ನು ವೇದಿಕೆಯ ಮೇಲೆ ಕರೆದು ಅಧ್ಯಾಪಕರು ಮೊದಲು ಅವರಿಗೆ ಶುಭ ಕೋರಿ, ಮಿಕ್ಕೆಲ್ಲಾ ವಿದ್ಯಾರ್ಥಿಗಳನ್ನು ಅವರಿಗೆ ಶುಭಾಶಯ ಕೋರಲು ಹೇಳಿದಲ್ಲಿ, ಪರಸ್ಪರ ಸಂಬಂಧಗಳು ಬೆಸೆದು ನಾವೆಲ್ಲಾ ಒಂದು ಎಂಬ ಭಾವ ಮೂಡಿ, 'ನಾನು' ಎಂಬ ಭಾವ ತಗ್ಗಬಹುದಲ್ಲವೇ ?

ಇದೇ ರೀತಿ ಸಂಕ್ರಾಂತಿಯ ಸಮಯದಲ್ಲಿ ತರಗತಿಯ ಎಲ್ಲ ಮಕ್ಕಳು ಹಿಡಿಯಷ್ಟು ಎಳ್ಳು–ಬೆಲ್ಲ ತಂದು ಒಂದು ಪಾತ್ರೆಯಲ್ಲಿ ಹಾಕಿ ಬೆರೆಸಿ ನಂತರ ಅಧ್ಯಾಪಕರು ಅದನ್ನು ಎಲ್ಲಾ ಮಕ್ಕಳಿಗೆ ಹಂಚಿ ಅದರ ಮಹತ್ವ ತಿಳಿಸಿದರೆ ಎಲ್ಲರಲ್ಲೂ ಏಕತೆಯ ಭಾವ ಮೂಡುವುದಲ್ಲವೇ ?

ಇಂಥವೇ ಹಲವು ಪ್ರಯೋಗವನ್ನು ನಿಮ್ಮಲ್ಲಿ ಮಾಡಿ ನಿಮ್ಮ ಅನುಭವವನ್ನು ನನ್ನೊಂದಿಗೆ ಹಂಚಿಕೊಳ್ಳುವಿರಾ ?

◆

# ಸಂಕಲ್ಪ ದಿನಾಚರಣೆ ಚಿತ್ರಗಳು




ಬಳ್ಳಾರಿಯಲ್ಲಿ ಸಂಕಲ್ಪ ದಿನಾಚರಣೆ



ಬೆಂಗಳೂರು ದಕ್ಷಿಣದಲ್ಲಿ ಸಂಕಲ್ಪ ದಿನಾಚರಣೆ



ಬೆಂಗಳೂರು ಉತ್ತರದಲ್ಲಿ ಸಂಕಲ್ಪ ದಿನಾಚರಣೆ

srushtidesigns@gmail.com

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

FEBRUARY 2014
Date of Posting
20th or 21st of every month

ಯುಗಾದಿ ಹಬ್ಬದ ಶುಭಾಶಯಗಳು



ಶ್ರೀ ಜಿ. ಕೆ. ವರದರಾಜು
ವಿಭಾಗ ಪ್ರಮುಖರು (ಬೆಂಗಳೂರು)
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)

ಮುಖ್ಯಶಿಕ್ಷಕರು
ಶ್ರೀ ಶಿವಯೋಗಿ ಮುನೇಶ್ವರಸ್ವಾಮಿ ಪಬ್ಲಿಕ್ ಪ್ರೌಢಶಾಲೆ
ಕನಕಪುರ, ರಾಮನಗರ ಜಿಲ್ಲೆ
9448104281, 9663566562